CC-O. In Public Domain. Digitized by eGangotri

कालटि

श्री शङ्कर जन्मस्थली और श्री शृंगेरिमठ मन्दिर



श्री शृंगेरि शंकर-मठ

कालटि

Sri Vidyabharathi Book Centre, Sringeri

डॉ. एम. गणेश अय्यर

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

कालटि

श्री शङ्कर जन्मस्थली
और
श्री शृंगेरिमठ मन्दिर

डॉ. एम. गणेश अय्यर
एम. ए., एम. एड्, पीएच. डी.

प्रकाशक
श्री शृंगेरि शंकर-मठ,
कालटि

Sri Vidyabharathi Book Centre, Sringeri

CC-O. In Public Domain. Digitized by eGangotri

KALADY

Sri Sankara JanmaSthali
aur
Sri Sringeri Mutt Mandir

(HINDI)

By

Dr. M Ganesa Iyer M. A., M. Ed., Ph. D.

Sri Sankara Jayanti 1989

Copies 2000

Price Rs. 3

Published by

Sri Sringeri Sankar Mutt

KALADY 683 574

Printed At

Chitra Printers,

Athani,

Alwaye. 683 585

Sri Vidyabharathi Book Centre, Sringeri

CC-O. In Public Domain. Digitized by eGangotri

विषयक्रम

भूमिका
प्रकाशकीय
कालटि प्रशस्ति
श्री अभिनव विद्यातीर्थ महास्वामीजी
और श्री भारती तीर्थ स्वामीजी

1. शुभारंभ 13
2. कालटि का पुनरुद्धार 14
3. श्री शृंगेरी मठ मन्दिर 16
4. आर्याम्बा की समाधि 20
5. श्री शक्ति विनायक मन्दिर 22
6. पूर्णानदी की पावन धारा और स्नान घाट 23
7. मगर घाट 25
8. श्रीकृष्ण जी का मंदिर 27
9. वेद-वेदान्त पाठशालाएँ 29
10. पुस्तकालय, प्रकाशन विभाग एवं अतिथिगृह 31
11. उपसंहार 32

Sri Vidyabharathi Book Centre, Sringeri

CC-O. In Public Domain. Digitized by eGangotri



जगद्गुरु श्री शङ्कराचार्य

Sri Vidyabharathi Book Centre, Sringeri

CC-O. In Public Domain. Digitized by eGangotri

೧. ಮಿತ್ರನ ಹಿತೋಪದೇಶ

ಒಬ್ಬ ತರುಣ ವಕೀಲರಲ್ಲಿಗೆ ಬಂದ. ಅವನ ಮುಖದಲ್ಲಿ ಸಂಕಟದ ಭಾವನೆ ಮೂಡಿತ್ತು. ಬಂದು ಅವನು ವಿನಂತಿಸಿಕೊಂಡ, "ವಕೀಲ ಸಾಹೇಬರೇ, ಜೈಲಿಗೆ ಹೋಗುವದನ್ನು ಉಳಿಸಿ ನನ್ನನ್ನು ಬದುಕಿಸಬಲ್ಲಿರಾ?" ನನ್ನ ಅಪರಾಧವು ಹೀಗಿದೆ ಎಂದನು. ಅದಕ್ಕೆ ವಕೀಲರು ಕೆಲಸವೇ, ಅಂದಹಾಗೆ ಅದೇನು? ನಿನ್ನೆ ಒಂಭತ್ತು ಘಂಟೆಗೆ ಲಿಯೋಕ್ಲಬ್ ಹತ್ತಿರದಲ್ಲಿರುವ ಒಂದು ಸೈಕಲ್ ಎತ್ತಿ ಕೊಂಡು ಹೋದೆನೆಂದು ನೀನು ಹೇಳುತ್ತಿ ಅಲ್ಲವೇ? ಆ ವೇಳೆಯಲ್ಲಿ ನೀನು ನಗರದ ಬೇರೆ ಭಾಗದಲ್ಲಿದ್ದೆ ಎಂದು ಸಾಕ್ಷಿ ಹುಟ್ಟಿಸು ಅಂದರೆ ನಿನ್ನನ್ನು ಉಳಿಸುತ್ತೇನೆ, ಫಳ್ಳಷ್ಟೂ ಹದರಬೇಕಾ ಲ್ಲ." ಆ ತರುಣ ಉದ್ದವಾದ ಉಸಿರುಗರೆದ, ದೊಡ್ಡದೊಂದು ಭಾರ ಎದೆಯ ಮೇಲಿಂದ ಇಳಿದಂತೆ ಭಾಸವಾಯಿತು. ತರುಣ ಉದ್ಗಾರ ತೆಗೆದು ಉಪಕಾರವಾಗುವದು ವಕೀಲರೇ! ನೀವು ಬಹಳ ಒಳ್ಳೆಯವರು, ನಿಮ್ಮ ಉಪಕಾರ ಹೇಗೆ ತೀರಿಸಬೇಕೋ ತಿಳಿಯದಾಗಿದೆ" ಎಂದನು.

ಆದರೆ ಈ ತರುಣನ ಮಾತಿನ 'ನುಣುಚು' ವಕೀಲರಿಗೆ ತಿಳಿಯದೆ ಹೋಗುವದೇ ಆತನು ಒಮ್ಮೆ ಖೇಕರಿಸಿದಂತೆ ಮಾಡಿ ಗಂಟಲು ಸರಿಪಡಿಸಿ ಹೇಳಿದ:

"ನೋಡು ಮಿಸ್ಟರ್ ಯಾರೂ ಕೇವಲಧನ್ಯತೆಯ ಮೇಲೆಯೆ ಜೀವನ ಸಾಗಿಸುವದು ಸಾಧ್ಯವಿಲ್ಲ" ಎಂದನು. ಅದಕ್ಕೆ ತರುಣನು ಅದು ನನಗೆ ಗೊತ್ತು ಎಂದನು. ಮಾತು ಮುಂದುವರಿಯದಂತೆ ಜೇಬಿನಿಂದ ತುಸು ಹೊರಬಿನ್ನ ತೆಗೆದು ವಕೀಲರ ಕೈಗೆ ಇತ್ತು

Sri Vidyabharathi Digital Centre, Sringeri

 CC-O. In Public Domain. Digitized by eGangotri

ಹೇಳಿದ: ತೆಗೆದುಕೊಳ್ಳಿರಿ ಸರ್, ಬರುವ ತಿಂಗಳು ಪಗಾರ ಆದ ತಕ್ಷಣ ಉಳಿದ ಹಣವನ್ನು ತಂದು ಮುಟ್ಟಿಸುತ್ತೇನೆ.

ಆದರೆ ವಕೀಲನು ತನ್ನ ವೃತ್ತಿಗನುಸಾರವಾಗಿ ಆ ತರುಣನ ಬಗ್ಗೆ ಕರಾರು ಪತ್ರ ಬರೆದು ಅದರ ಮೇಲೆ ಅವನ ಸಹಿ ಹಾಕಿಸಿ ಕೊಂಡ.

ಮುಂದೆ ನ್ಯಾಯಾಲಯದಲ್ಲಿ ಸೈಕಲ್ ಕದ್ದ ತರುಣನ ವಿಚಾರಣೆ ನಡೆಯಿತು. ಆರೋಪಿಯ ಪರವಾಗಿ ಇಬ್ಬರು ಸಾಕ್ಷಿ ನುಡಿದರು. ಸೈಕಲ್ ಕಳುವಾದ ವೇಳೆಯಲ್ಲಿ ಈ ತರುಣನನ್ನು ಅವರು ಲಿಯೋಕ್ಲಬ್‌ದಿಂದ ದೂರದಲ್ಲಿ ಒಂದು ಸ್ಥಳದಲ್ಲಿ ಕಂಡುದಾಗಿ ದೇವರ ಸಾಕ್ಷಿಯಾಗಿ ಹೇಳಿದರು.

ಅಪರಾಧದ ವಿಚಾರಣೆ ಮುಗಿಯಿತು. 3–4 ದಿವಸಗಳಲ್ಲಿ ನ್ಯಾಯದ ನಿರ್ಣಯ ಆಗುತ್ತಿತ್ತು. ಈ ಅವಧಿಯಲ್ಲಿ ಆ ತರುಣನು ತನ್ನ [illegible]ಯ ಗೆಳೆಯ ಹನುಮಂತನನ್ನು ಕಾಣಲು ಹೋದನು. ಬಹಳ ದಿವಸಗಳಿಂದ ಭೇಟಿ ಆಗಿತ್ತು. ಇಬ್ಬರೂ ಸೇರಿ ಕೆಲವು ಸಮಯದವರೆಗೆ ಮಾತನಾಡಿದರು. ಆಮೇಲೆ ಹನುಮಂತನು ಕೇಳಿದ: "ಏನಪ್ಪ ರಾಮು ಯಾವುದೋ ಚಿಂತೆಯಲ್ಲಿ ಇದ್ದಂತೆ ಕಾಣುತ್ತದೆ? ಏನಿದ್ದರೂ ಹೇಳು ನನ್ನಿಂದಾಗುವಂತಿದ್ದರೆ ನಾನು ಸಹಾಯ ಮಾಡುತ್ತೇನೆ, ನಿರ್ಭಿಡೆಯಿಂದ ಹೇಳು ಅಂದನು. ಆಮೇಲೆ ರಾಮು ತಾನು ಸಾಯಕಲ್ ಕದ್ದುದನ್ನೂ ನ್ಯಾಯ ವಿಚಾರಣೆ ನಡೆದುದನ್ನೂ ಹೇಳಿ ಎದೆ ಹಗುರು ಮಾಡಿಕೊಂಡನು."

ಆಗ ಹನುಮಂತನು ಕರುಣಾ ದನಿಯಲ್ಲಿ: "ಹಣದ ಅಡಚಣಿ ಬಹಳವಾಗಿತ್ತೇನೋ ನನ್ನ ಹತ್ತಿರ ಏಕೆ ಬರಲಿಲ್ಲ ಎಂದನು. ಅದಕ್ಕೆ ರಾಮು ಅಂದನು, ಏನೋ ಬೇರೆಯವರ ಹತ್ತಿರ ದುಡ್ಡು ಕೇಳುವದೆಂದರೆ [illegible]ಆಗದು ಬಿಡಪ್ಪ. ಆದರೆ ಜೈಲಿಗೆ ಹೋಗುವ

Sri Vidyabharathi Book Centre, Sringeri

CC-O. In Public Domain. Digitized by eGangotri

ದೆಂದರೆ ಇನ್ನೂ ನಾಚಿಕೆಯಲ್ಲವೇ ಎಂದನು ಹನುಮಂತ. ಹನುಮಂತನ ದನಿಯಲ್ಲಿ ಆತ್ಮೀಯತೆ ಇತ್ತು, ರಾಮು ಎಂದನು: ಹೌದು ಹನುಮಂತಾ ನೀನೆನ್ನುವದು ಸರಿ, ವಕೀಲರು ನನಗೆ ಜೈಲಿಗೆ ಹೋಗುವದನ್ನು ಉಳಿಸಲಿದ್ದಾರೆ, ಈಗಾಗಲೆ ನ್ಯಾಯದ ವಿಚಾರಣೆ ಆಗಿದೆ. ಇಬ್ಬರು ಸುಳ್ಳು ಸಾಕ್ಷಿ ಹೇಳಿಸಿ ಕಳುವಾದ ವೇಳೆಯಲ್ಲಿ ನಾನು ಅಲ್ಲಿ ಇದ್ದಿಲ್ಲಾ" ಎಂದು ಹೇಳಿಸಿದೆ.

ಅದಕ್ಕೆ ಹನುಮಂತನೆಂದ:

"ನೋಡು ರಾಮು ಹೀಗೆ ಸುಳ್ಳು ಹೇಳಿ ಬಿಡುಗಡೆ ಹೊಂದುವದು ನನಗೆ ಸರಿ ಕಾಣುವದಿಲ್ಲ. ಹೀಗೆ ಮಾಡಿದುದೇ ಆದರೆ ಜಗತ್ತಿನಲ್ಲಿ ನೀನು ಶಾಂತಿಯಿಂದ ಬಾಳಿ ಬದುಕಲಾರೆ. ಹಾಗಾದರೆ ನಾನು ಸೆರೆಮನೆಗೆ ಹೋಗಬೇಕೆಂದು ನೀನು ಬಯಸುತ್ತೀಯಾ?" ಎಂದ ರಾಮು ಅದಕ್ಕೆ ಹನುಮಂತನು ಉತ್ತರಿಸಿದ.

"ಇಲ್ಲಾ, ಹಾಗೇನಿಲ್ಲ. ಆದರೆ ನನಗನ್ನಿಸುತ್ತದೆ, ಸುಳ್ಳು ಹೇಳಿ ಜೈಲು ತಪ್ಪಿಸಿಕೊಳ್ಳುವದಕ್ಕಿಂತ ಸತ್ಯ ನುಡಿದು ಜೈಲು ಸೇರುವದೇ ಸರಿ, ಇಲ್ಲದೇ ಹೋದರೆ ನಿನ್ನ ಬಗ್ಗೆ ನನ್ನಲ್ಲಿರುವ ಗೌರವ ಇಲ್ಲದಂತಾಗುವದು ಖಂಡಿತ. ನೀನೇ ವಿಚಾರಿಸು.

ಆಗ ರಾಮು ತಾನು ಮಾಡುತ್ತಿರುವ ಅಪರಾಧದ ಅರಿವಾಗಿ ಹೇಳಿದ: "ತುಂಬಾ ಒಳ್ಳೆದಾಯಿತು ಹನುಮಂತ. ನಿನ್ನನ್ನು ಕಂಡಿದ್ದು ಯಾವುದು ನ್ಯಾಯವಾಗಿದೆಯೊ ಅದನ್ನೇ ಮಾಡುತ್ತೇನೆ, ಅದು ಎಷ್ಟು ಕಠಿಣವಾಗಿದ್ದರೂ ಸರಿಯೇ."

"ಹಾಗಾದರೆ ನೀನು ನನ್ನ ಮಿತ್ರನಾಗಿ ಉಳಿಯುತ್ತಿ, ರಾಮು ನನಗೆ ಈಗ ಆನಂದವಾಯಿತು."

Sri Vidyasharathi Book Centre, Sringeri

 CC-O. In Public Domain. Digitized by eGangotri

ಹನುಮಂತನ ಹಿತವಾದನುಡಿ ಕೇಳಿ ಮನಸಾ ಒಪ್ಪಿಕೊಂಡು ರಾಮು ಮನೆಗೆ ಮರಳಿದ.

ನ್ಯಾಯ ನಿರ್ಣಯದ ದಿವಸ ಬಂತು. ಕೋರ್ಟು ಶುರು ವಾಗಲಿದ್ದಿತು. ನ್ಯಾಯಾಧೀಶರು ನ್ಯಾಯ ನಿರ್ಣಯ ಸಾರ ಲಿದ್ದರು. ಆಗ ರಾಮು ಎದ್ದು ನಿಂತವನೇ ತಾನೇ ಸೈಕಲ್ ಕದ್ದದ್ದು ಸತ್ಯವೆಂದು ಹೇಳಿದನು. ಆತನ ಮಾತು ಕೇಳಿ ನ್ಯಾಯಾ ಧೀಶನಿಗೆ ಆಶ್ಚರ್ಯವಾಗಿ ಆತ ಕೇಳಿದ:

"ಯಾವ ಕಾರಣದಿಂದಾಗಿ ನೀನು ಹೀಗೆ ಹೇಳಿ, ಈಗ ತಪ್ಪನ್ನು ಒಪ್ಪಿಕೊಳ್ಳುತ್ತಿ? ಸುಮ್ಮನಾಗಿದ್ದರೆ ನಿನ್ನನ್ನು ನಿರಪರಾಧಿ ಎಂದು ಬಿಡಬಹುದಾಗಿತ್ತಲ್ಲಾ."

ರಾಮು ಅಂದನು: ಅದು ಸರಿ ಸರ್, ನಾನು ಆತ್ಮಗೌರವಕ್ಕೆ ಎರವಾಗಬೇಕಾಗುತ್ತಿತ್ತು. ಅಲ್ಲದೆ ಮನಸ್ಸಿನ ನೆಮ್ಮದಿಯೂ ನನ್ನಲ್ಲಿ ಉಳಿಯುತ್ತಿರಲಿಲ್ಲ.

ಅಪರಾಧಿ ಅಪರಾಧವನ್ನು ಒಪ್ಪಿಕೊಂಡ ಮೇಲೆ ಹಿಂದಿನ ವಿಚಾರಣೆ ಬದಿಗಿತ್ತು ನ್ಯಾಯಾಧೀಶನಿಗೆ ಅನಿವಾರ್ಯವಾಗಿ ಶಿಕ್ಷೆ ವಿಧಿಸಬೇಕಾಗಿ ಬಂತು. ರಾಮು ಸಮಾಧಾನದಿಂದ ಸೆರೆಮನೆಗೆ ಹೋದ.

ತನ್ನ ಒಳ್ಳೆ ಸ್ವಭಾವ ವರ್ತನೆಗಳಿಂದ ಆತ ಕಾರಾಗೃಹ ವಾಸ ವನ್ನು ಎರಡು ತಿಂಗಳು ಮುಂಚಿತವಾಗಿ ಬಿಡಬೇಕಾಯಿತು. ಆತ ನಿಗೆ ಸೆರೆಮನೆ ಸೇರಿ ಕಲಿಯಬೇಕಾಗಿ ಬಂದ ಪಾಠ ದುಸ್ತರವಾದ ಪಾಠವಾಗಿತ್ತು. ಆದರೂ ರಾಮುಗೆ ಅದರಿಂದ ಅಪಾರವಾದ ಆನಂದವೇ ಆಯಿತು. ಆತ ಹನುಮಂತನಿಗೆ ಹೃತ್ಪೂರ್ವಕವಾಗಿ ಅಭಿನಂದಿಸಿದ. ಮತ್ತು ಆತನಿಗೆ ಧನ್ಯವಾದ ಹೇಳಲಿಚ್ಛಿಸಲು ಇನ್ನೊಂದು

Shri Vidyabharathi Pustaka Kendra, Sringeri

 CC-O. In Public Domain. Digitized by eGangotri

ತಪ್ಪು, ಅದನ್ನು ಮುಚ್ಚಲು ಮಗದೊಂದು ತಪ್ಪು--ಹೀಗೆ ತಪ್ಪು ಮಾಡುವ ಬೇರನ್ನು ಮೂಲದಲ್ಲಿಯೇ ಕಿತ್ತು ಹಾಕ ಹಚ್ಚಿದ ಹನುಮಂತನಿಗೆ ರಾಮು ಚಿರಋಣಿಯಾದ.

Sri Vidyabharathi Book Centre, Sringeri

CC-O. In Public Domain. Digitized by eGangotri

೨. ಇಬ್ಬರ ನ್ಯಾಯ, ಮೂರನೆಯವನಿಗೆ ಲಾಭ

ಒಂದು ಅರಣ್ಯದಲ್ಲಿ ಒಂದು ಸಿಂಹವೂ ಒಂದು ಚಿರ್ಚವೂ ವಾಸವಾಗಿದ್ದವು. ಸಿಂಹಕ್ಕೆ ವಯಸ್ಸಾಗಿದ್ದರಿಂದ ಅಷ್ಟು ಓಡಲು ಆಗುತ್ತಿರಲಿಲ್ಲ. ಚಿರ್ಚವು ತರುಣ ಶಕ್ತಿಯುತವೂ ಆಗಿದ್ದಿತು. ಇಷ್ಟಾದರೂ ಆ ಚಿರ್ಚವು ಮುದಿ ಸಿಂಹಕ್ಕೆ ಹೆದರಿ ಸಾಯುತ್ತಿತ್ತು. ಏಕೆಂದರೆ, ಸಿಂಹ ತನ್ನ ಜಾತಿಗೆ ಅನುಗುಣವಾಗಿ ಅಂಥ ಮುಪ್ಪಿನಲ್ಲಿಯೂ ಚಿರ್ಚಕ್ಕಿಂತ ಹೆಚ್ಚು ಪ್ರಭಲವಾಗಿತ್ತು.

ಒಮ್ಮೆ 3–4 ದಿವಸಗಳಿಂದ ಸಿಂಹಕ್ಕಾಗಲಿ, ಚಿರ್ಚಕ್ಕಾಗಲಿ ಬೇಟೆಯೇ ಸಿಗಲಿಲ್ಲ. ಬಹಳ ಹಸಿದಿದ್ದವು. ಅಷ್ಟರಲ್ಲಿಯೇ ಅವುಗಳ ಕಣ್ಣಿಗೆ ಒಂದು ಪುಟ್ಟ ಚಿಗರೆ ಬಿದ್ದಿತು. ಅದು ಅಲ್ಲಿಯೇ ಸಮೀಪದಲ್ಲಿ ಹುಲ್ಲು ಮೇಯುವುದರಲ್ಲಿ ತಲ್ಲೀನವಾಗಿತ್ತು.

ಚಿರ್ಚ ಸಿಂಹಕ್ಕೆ ಹೇಳಿತು: "ನೋಡಿ ವನರಾಜಾ ನಾನು ಚಿಗರೆಯನ್ನು ಹಿಡಿಯುತ್ತೇನೆ. ಆದರೆ ನೀವು ಕೊಳ್ಳದ ಆಚೆಯ ಮಗ್ಗಲು ಕುಳಿತುಕೊಳ್ಳಿರಿ. ಚಿಗರೆ ಎಲ್ಲಿಯಾದರೂ ಅಡಗಿಕೊಳ್ಳಬಾರದು.

ಸಿಂಹ ಅದಕ್ಕೆ ಒಪ್ಪಿಕೊಂಡು ಹಾಗೆಯೇ ಮಾಡಿತು. ಚಿರ್ಚವು ಓಡುತ್ತ ಹೋಗಿ, ಚಿಗರೆಯನ್ನು ಹಿಡಿದು ಕೊಂದು ಹಾಕಿತು. ಆದರೆ ಆ ಚಿಗರೆ ಬಹಳ ಸಣ್ಣದಾಗಿತ್ತು. ಅದರಿಂದ ಇಬ್ಬರಲ್ಲಿ ಯಾರದೇ ಒಬ್ಬರ ಹಸಿವು ಮಾತ್ರ ಹಿಂಗುವಂತಿತ್ತು. ಆದರೆ ಎರಡೂ ಬಹಳೇ ಹಸಿದಿದ್ದವು. ಎರಡರ ಮನದಲ್ಲಿ ಒಂದೇ ಆಸೆ ತಾನೊಬ್ಬನೇ ತಿಂದು ಹಾಕಬೇಕೆಂದು ಚಿರ್ಚ ಹೇಳಿತು. "ನೋಡಿ ವನರಾಜಾ, ಚಿಗರೆಯನ್ನು ಹಿಡಿದದ್ದು ನಾನೆ ಆದ್ದರಿಂದ ನಾನೇ

CC-O. In Public Domain. Digitized by eGangotri Sri Vidyajnana Trust Book Centre, Sringeri

CC-O. In Public Domain. Digitized by eGangotri

ಅದನ್ನು ತಿಂದು ಬಿಡುವೆನು," ಸಿಂಹ ಗರ್ಜಿಸಿತು. "ಏನಿದು? ಈ ಅರಣ್ಯದ ರಾಜ ನಾನು ಚಿಗರೆಯನ್ನು ನಾನು ತಿನ್ನುತ್ತೇನೆ, ನೀನು ಓಡಬಲ್ಲೆ. ಓಡಿ ಇನ್ನೊಂದು ಬೇಟೆಯನ್ನು ಹಿಡಿದು ಹಸಿವೆ ಹಿಂಗಿಸಿಕೋ?."

ಹೀಗೆ ಚಿಗರೆಗಾಗಿ ತಮ್ಮ-ತಮ್ಮಲ್ಲಿ ಜಗಳಕ್ಕೆ ತಯಾರಾದವು. ಇದನ್ನೆಲ್ಲಾ ನೋಡುತ್ತ ಸಮೀಪದ ಪೊದೆಯೊಂದರಲ್ಲಿ ನರಿಯೊಂದು ಕುಳಿತಿತ್ತು. ಸಿಂಹ ಚಿರ್ಚಗಳೆರಡೂ ಹೋರಾಡಿ ಪರಸ್ಪರ ಗಾಯಗೊಂಡು ಕೊನೆಯಲ್ಲಿ ಎರಡೂ ನಿತ್ರಾಣವಾಗಿ ಬಿದ್ದುಕೊಂಡವು. ಆಗ ಆ ನರಿಯು ಪೊದೆಯಿಂದ ಹೊರಗೆ ಬಂದು, ಚಿಗರೆಯನ್ನು ಎಳೆದೊಯ್ದು ತಿನ್ನಹತ್ತಿತು. ಸಿಂಹ–ಚಿರ್ಚಗಳೆರಡೂ ಮೇಲೆಳುವ ಚೈತನ್ಯವೇ ಉಳಿದಿರಲಿಲ್ಲ. ಅವೆರಡಕ್ಕೂ ನೋಡುತ್ತಲೇ ಬೀಳಬೇಕಾಯಿತು.

ಈ ಇಬ್ಬರ ನ್ಯಾಯದಲ್ಲಿ ನರಿಯು ಲಾಭ ತೆಗೆದುಕೊಂಡಿತು.

ಯಾರೂ ತಮ್ಮ–ತಮ್ಮಲ್ಲಿ ನ್ಯಾಯ ಮಾಡಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

೩. ಸತ್ಯವಂತ ಚಿಗರೆ

ಒಂದು ಮಹಾ ಅರಣ್ಯ. ಆ ಅರಣ್ಯದಲ್ಲಿ ಒಂದು ದೊಡ್ಡ ಕೆರೆ ಇತ್ತು. ಆ ಪೂರ್ತಿ ಅರಣ್ಯಕ್ಕೆ ಅದು ಒಂದೇ ಕೆರೆಯಾದ್ದರಿಂದ, ಕಾಡು ಪ್ರಾಣಿಗಳೆಲ್ಲಾ ನೀರು ಕುಡಿಯಲೆಂದು ಅಲ್ಲಿಗೆ ಬರುತ್ತಿದ್ದವು. ಬೇಟೆಗಾರನೊಬ್ಬ ಒಂದು ದಿವಸ ಆ ಕೆರೆಗೆ ಬಂದ. ಕೈಕಾಲುಮುಖ ತೊಳೆದುಕೊಂಡು ಒಂದಿಷ್ಟು ನೀರು ಕುಡಿದ. ಆಗ ಆತನು ಬಹಳೇ ದಣಿದು ಹೋಗಿದ್ದ. ಸಾಕಷ್ಟು ಹಸಿವೆಯೂ ಆಗಿದ್ದಿತು. ಆತ ಯೋಚಿಸಿದ: "ಈ ಕಾಡಿನ ಪ್ರಾಣಿಗಳು ನೀರು ಕುಡಿಯಲು ಇಲ್ಲಿ ಬರಬಹುದು. ಇಲ್ಲಿಯೇ ಜಪ್ಪಿಸಿ ಕುಳಿತರೆ ಸುಲಭದಲ್ಲಿ ಬೇಟೆ ಸಿಗಬಹುದು." ಹಾಗೆ ವಿಚಾರ ಬಂದೊಡನೇ ಆತನು ಸಮೀಪದ ಮರವನ್ನೇರಿ ಕುಳಿತುಕೊಂಡನು.

ಅಷ್ಟರಲ್ಲಿ ಚಿಗರೆಯೊಂದು ಆ ಕೆರೆಗೆ ನೀರು ಕುಡಿಯಲೆಂದು ಬಂದಿತು. ಅದನ್ನು ಕೊಲ್ಲಲೆಂದು ಬೇಟೆಗಾರ ಬಿಲ್ಲು ಎತ್ತಿ, ಬಾಣ ಹೂಡಿದ. ಆದರೆ ಆ ಚಿಗರೆ ಆಗಲೇ ಬೇಟೆಗಾರನನ್ನು ನೋಡಿಬಿಟ್ಟಿತು. ಅದು ಹೇಳಿತು:

"ಅಣ್ಣಾ, ನಾನೀಗ ಓಡಿ ನಿನ್ನ ಬಾಣವನ್ನು ತಪ್ಪಿಸಿಕೊಳ್ಳಲಾರೆ. ಆದರೂ ನೀನು ನನ್ನ ಮೇಲೆ ಸ್ವಲ್ಪ ದಯೆ ತೋರಬೇಕೆಂದು ಬೇಡಿಕೊಳ್ಳುತ್ತೇನೆ. ನನ್ನ ಎರಡು ಪುಟ್ಟ ಮರಿಗಳಿವೆ. ಅವು ನನ್ನ ದಾರಿ ಕಾಯುತ್ತಿರುತ್ತವೆ. ನೀನು ನನಗೆ ಸ್ವಲ್ಪ ಅವಕಾಶ ಕೊಡು. ನಾನು ಮನೆಗೆ ಹೋದವಳೇ ಮರಿಗಳಿಗೆ ಹಾಲು ಕುಡಿಸಿ, ನನ್ನ ಮಿತ್ರರಿಗೆ ಅವುಗಳನ್ನು ಒಪ್ಪಿಸಿ ಬೇಗನೆ ಮರಳಿ ಬರುವದಾಗಿ ವಚನ ಕೊಡುತ್ತೇನೆ."

Sri Vidyabharathi Book Centre, Sringeri

 CC-O. In Public Domain. Digitized by eGangotri

ಚಿಗರೆಯ ಮಾತು ಕೇಳಿ ಬೇಟೆಗಾರನಿಗೆ ನಗೆ ಬಂತು. ಆ ಚಿಗರೆ ಮರಳಿ ಬಂದೀತೆಂಬ ನಂಬಿಕೆ ಅವನಿಗಿರಲಿಲ್ಲ. ಆದರೂ ಆತನು ವಿಚಾರಿಸಿದ: ಈ ಚಿಗರೆ ಹೀಗೆ ದೈನಾಸ ಬಿಡುತ್ತಿರುವಾಗ ಒಮ್ಮೆ ಬಿಟ್ಟು ನೋಡಿದರಾಯಿತು. ನನ್ನ ದೈವದಲ್ಲಿ ಬೇಟೆ ಇದ್ದಲ್ಲಿ, ಸಿಕ್ಕೇ ಸಿಗುತ್ತದೆ.

ಈ ನಿರ್ಧಾರಕ್ಕೆ ಬಂದು ಆತನು ಚಿಗರೆಯನ್ನು ಬಿಟ್ಟ.

ಮುಂದೆ ಸ್ವಲ್ಪೀ ಸಮಯದಲ್ಲಿ ಒಂದು ಸುಂದರವಾದ ಸಾರಂಗವು ಅಲ್ಲಿಗೆ ಬಂತು. ಅದರ ಟಿಸಿಲು-ಟಿಸಿಲಾದ ಕೋಡುಗಳು ಬಹಳೇ ಸುಂದರವಾಗಿದ್ದವು. ಮತ್ತೆ, ಬೇಟೆಗಾರ ಬಾಣ ಹೂಡಹತ್ತಿದ. ಆದರೆ ಸಾರಂಗ ಅದನ್ನು ನೋಡಿ ಬೇಡಿಕೊಂಡಿತು: ಅಣ್ಣಯ್ಯಾ ನನ್ನ ಮಕ್ಕಳನ್ನು ಅಗಲಿ ಬಹಳ ಸೊತ್ತಾಗಿದೆ. ಅವರೆಲ್ಲರೂ ಗಾಬರಿ ಆಗಿರಬೇಕು. ಅವರ ಹತ್ತಿರ ಹೋಗಿ ಅವರಿಗೆ ಸಮಾಧಾನಪಡಿಸಿ ಪುನಃ ನಿನ್ನ ಕಡೆಗೇ ಬರುತ್ತೇನೆ. ನಾನು ಸತ್ಯವಾಗಿ ಹೇಳುತ್ತೇನೆ, ದಯಮಾಡಿ ನನ್ನನ್ನು ಬಿಟ್ಟುಬಿಡು ಎಂದಿತು.

ಆದರೆ ಬೇಟೆಗಾರನಿಗೆ ಬಹಳೇ ಹಸಿವಾಗಿತ್ತು. ಕೊಂದು ಹಾಕಬೇಕೆಂಬ ಆಶೆ ಬಲವತ್ತರವಾಗಿತ್ತು. ಆದರೂ ಸಾರಂಗದ ಪ್ರಾರ್ಥನೆ ಕೇಳಿ ಮನ ಕರಗಿತು. ದೈವದಲ್ಲಿದ್ದರೆ ಊಟ ಮಾಡುವೆ ಇಲ್ಲವಾದರೆ ಇಲ್ಲಾ ಎಂದುಕೊಂಡು ಅದಕ್ಕೂ ಹೋಗಲು ಅನುಮತಿ ಕೊಟ್ಟ. ಆತ್ತ ಚಿಗರೆಯು ತನ್ನ ಮರಿಗಳನ್ನು ಕಂಡು, ಅಕ್ಕರೆಯಿಂದ ಹಾಲು ಕುಡಿಸಿತು. ಅಂತಿಮ ಅಗಲುವಿಕೆಯನ್ನು ನೆನೆದು ಮುದ್ದು ಮಾಡಿತು. ಆಮೇಲೆ ಕರ್ತವ್ಯದ ಪರಿಪಾಲನೆಗಾಗಿ ತನ್ನ ಮಿತ್ರ ಚಿಗರೆಯನ್ನು ಕಂಡು ವಿಷಯವನ್ನೆಲ್ಲಾ ತಿಳಿಸಿ ಹೇಳಿ, ತನ್ನ ಮಕ್ಕಳನ್ನು ಅದಕ್ಕೆ ಒಪ್ಪಿಸಿತು. ಅಷ್ಟರಲ್ಲಿ ಸಾರಂಗವೂ ಆಗಮಿಸಿತು. ಅದು ಮಕ್ಕಳನ್ನು ಮುದ್ದಿಸಿತು. ಮಕ್ಕಳಿಗೆ ತಾನು

Sri Vidyabharathi Book Centre, Shirsi

 CC-O. In Public Domain. Digitized by eGangotri

ಅಗಲುವ ಸ್ಥಿತಿ ಹೇಳಿತು. ಆದರೆ ಪುಟ್ಟ ಮರಿಗಳು ತಾಯಿ-ತಂದೆಗಳನ್ನು ಅಗಲಿರಲು ಒಪ್ಪದಾದವು. ಅವರೊಂದಿಗೆ ತಾವೂ ಸಹ ಆತ್ಮ ಬಲಿದಾನ ಮಾಡುವದಾಗಿ ಹಟ ಹಿಡಿದವು. ಕೊನೆಗೂ ಅವುಗಳನ್ನೂ ಜೊತೆಗೆ ಕರೆದುಕೊಂಡು ಬರಬೇಕಾಯಿತು.

ಅಣ್ಣಾ, ಬೇಟೆಗಾರ ನಾವೀಗ ಎಲ್ಲರೂ ಸೇರಿ ಬಂದಿದ್ದೇವೆ. ನೀನು ನಮ್ಮನ್ನು ಕೊಂದು ನಿನ್ನ ಹಸಿವೆ ಹಿಂಗಿಸಿಕೋ ಎಂದವು. ಆ ಚಿಗರೆ-ಸಾರಂಗಗಳ ಸತ್ಯ-ಧರ್ಮ ನೋಡಿ ಬೇಟೆಗಾರನಿಗೆ ಬಹಳೇ ಆಶ್ಚರ್ಯವಾಯಿತು. ಆತನು ಮರದಿಂದ ಇಳಿದುಬಂದು ಹೇಳಿದ.

"ನೀವು ಪ್ರಾಣಿಗಳಿದ್ದೂ ಎಷ್ಟು ಸತ್ಯವಂತರಾಗಿದ್ದೀರಿ. ಪ್ರಾಣದ ಆಶೆ ತೊರೆದು ಸತ್ಯದ ಪರಿಪಾಲನೆ ಮಾಡಲು ಬಂದಿದ್ದಿರಿ. ನಿಮ್ಮ ಹಿರಿಮೆಯ ಮುಂದೆ ನಾನು ತಲೆ ತಗ್ಗಿಸುವೆನು. ನಿರಪರಾಧಿ ಅದಂಥ ನಿಮ್ಮವರನ್ನು ಕೊಲ್ಲಲು ಬಂದ ಎಂಥಾ ಪಾಪಿ ಎಂಬುದರ ಅರಿವು ನನಗೆ ಈಗ ಆಗಿದೆ. ಇಂದಿನಿಂದ ನಾನು ಬೇಟೆ ಆಡಿದರೆ ಶಿವನ ಮೇಲೆ ಆಣೆ! ಇದೇ ಮಾತಿನ ಕೊನೆಯೊಡನೆ ಬೇಟೆಗಾರ ಬಿಲ್ಲು ಮುರಿದು ಹಾಕಿದ. ಸತ್ಯಕ್ಕೆ ಜಯವಾಯಿತು. ಅದೇ ಸಮಯಕ್ಕೆ ಸ್ವರ್ಗಲೋಕದಿಂದ ವಿಮಾನ ಇಳಿಯಿತು. ಸತ್ಯ ಪರಿಪಾಲನೆಗಾಗಿ ಚಿಗರೆ ಬಳಗ ಮತ್ತು ಅವುಗಳ ಮೇಲೆ ದಯೆ ತೋರಿದ ಬೇಟೆಗಾರನಿಗೆ ದೇವದೂತನು ಸ್ವರ್ಗಕ್ಕೆ ಒಯ್ದನು."

CC-O. In Public Domain. Digitized by eGangotri

೪. ತಾಳ್ಮೆಯ ಪ್ರತಿಫಲ

ವಿಜಯಪುರ ಎಂಬ ದೊಡ್ಡ ಊರಲ್ಲಿ ಒಮ್ಮೆ ಭೀಕರ ಬರ ಗಾಲ ಬಿದ್ದಿತು. ಆಹಾರವಿಲ್ಲದೇ ಜನರು ತತ್ತರಿಸಿ ಸಾಯಲಾರಂಭಿಸಿದರು. ಅಂಥ ಸಮಯದಲ್ಲಿ ಬಡಮಕ್ಕಳ ಸಹಾಯಾರ್ಥವಾಗಿ ಒಬ್ಬ ದಯಾಳು ಶ್ರೀಮಂತ ಮುಂದೆ ಬಂದನು. ಪ್ರತಿಯೊಂದು ಮಗುವಿಗೆ ಪ್ರತಿದಿನವೂ ಒಂದು ರೊಟ್ಟಿಯನ್ನು ಕೊಡುವುದಾಗಿ ಸಾರಿದನು.

ಮರುದಿವಸ ಬೆಳಗಿನಲ್ಲಿ ಎಲ್ಲಾ ಕಡೆಗಳಿಂದ ಅನೇಕ ಮಕ್ಕಳು ಬಂದು ಶ್ರೀಮಂತನ ಮನೆಯ ಹತ್ತಿರ ಸೇರಿದರು. ಅವರೆಲ್ಲರಿಗೂ ಸೇವಕರು ರೊಟ್ಟಿಗಳನ್ನು ಹಂಚ ತೊಡಗಿದರು. ಹಂಚುವ ರೊಟ್ಟಿಗಳಲ್ಲಿ ಕೆಲವು ದೊಡ್ಡವು, ಇನ್ನು ಕೆಲವು ಚಿಕ್ಕವು ಇದ್ದವು. ದೊಡ್ಡ ರೊಟ್ಟಿಗಳನ್ನೇ ಪಡೆಯಬೇಕೆಂದು ಮಕ್ಕಳು ಛಡಿಪಡಿಸ ಪತ್ತಿದರು. ಒಬ್ಬರೊಬ್ಬರನ್ನು ನೂಕಿ ಮುನ್ನುಗ್ಗಿ ದೊಡ್ಡ ರೊಟ್ಟಿ ಪಡೆಯಲು ಪ್ರಯತ್ನಿಸತೊಡಗಿದರು.

ಅಂಥವರಲ್ಲಿ ಒಂದು ಪುಟ್ಟ ಹುಡುಗಿಯೊಬ್ಬಳು ತುಸು ದೂರದಲ್ಲಿ ಸುಮ್ಮನೇ ನಿಂತುಕೊಂಡು ಎಲ್ಲ ಮಕ್ಕಳೂ ರೊಟ್ಟಿ ಪಡೆದ ನಂತರವೇ ಆಕೆ ರೊಟ್ಟಿ ಸ್ವೀಕರಿಸಲು ಮುಂದೆ ಬಂದಳು. ಆಗ ಸೇವಕರ ಬುಟ್ಟಿಯಲ್ಲಿ ಕೊನೆಯದಾದ ಒಂದೇ ಒಂದುರೊಟ್ಟಿ ಉಳಿದಿದ್ದು ಅದೂ ಸಹಾ ಚಿಕ್ಕದಾಗಿತ್ತು. ಆದರೆ ಹುಡುಗಿ ಮಾತ್ರ ಅದನ್ನು ಅತೀ ಸಂತೋಷದಿಂದ ಸ್ವೀಕರಿಸಿ ಮನೆಗೆ ತೆರಳಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡನೇ ದಿವಸ ಮತ್ತೆ ರೊಟ್ಟಿಗಳನ್ನು ಹಂಚಲಾಯಿತು. ಅಂದು ಕೂಡಾ ಪುಟ್ಟ ಬಾಲಿಕೆಯ ಪಾಲಿಗೆ ತೀರಾ ಸಣ್ಣದಾದ ರೊಟ್ಟಿಯೇ ಬಂತು. ಆಕೆ ಮನೆಗೆ ತಂದು ಅದನ್ನು ತಿನ್ನಲೆಂದು ರೊಟ್ಟಿಯನ್ನು ಮುರಿಯುತ್ತಾಳೆ. ಆದರೆ ಅದರಲ್ಲಿ ಒಂದು ಬಂಗಾರದ ನಾಣ್ಯ ಇದ್ದದ್ದು ಕಂಡು ಬಂತು. ಆಗ ಆ ಹುಡುಗಿ ತನ್ನ ತಾಯಿಗೆ ಹೇಳಿದಳು. ಆಗ ತಾಯಿಯು "ಮಗೂ, ಈ ಬಂಗಾರದ ನಾಣ್ಯವನ್ನುಒಯ್ದು ಆ ಶ್ರೀಮಂತನ ಮನೆಗೆ ಮುಟ್ಟಿಸಿ ಬಾರಮ್ಮಾ" ಎಂದಳು. ತಾಯಿಯ ಹೇಳಿಕೆ ಮೇರೆಗೆ ಆ ಬಾಲಿಕೆಯು ಓಡುತ್ತ ಶ್ರೀಮಂತನ ಹತ್ತರ ಬಂದಳು.

ಶ್ರೀಮಂತ ಕೇಳಿದ: ಏನೂ ಮಗೂ ಏನು ಬೇಕಿತ್ತು ಏತಕ್ಕಾಗಿ ಬಂದೆ? ಆಗ ಹುಡುಗಿಯು "ನನ್ನ ರೊಟ್ಟಿಯಲ್ಲಿ ಈ ಬಂಗಾರದ ನಾಣ್ಯ ಸಿಕ್ಕಿದೆ. ಹಿಟ್ಟಿನಲ್ಲಿ ಬಿದ್ದು ಹೀಗಾಗಿರಬಹುದು ಅದಕ್ಕೆ ನಿಮಗೆ ಮರಳಿ ಕೊಡಲು ತಂದಿರುವೆ" ತೆಗೆದುಕೊಳ್ಳಿರಿ ಎಂದಳು. ಆಗ ಶ್ರೀಮಂತನು: "ಇಲ್ಲ ಮಗು, ಇದು ನಿನ್ನ ಸಂತೋಷ ತೃಪ್ತಿಗಾಗಿ ನಿನಗಿತ್ತ ಬಹುಮಾನವಾಗಿದೆ ಇದು ನಿನ್ನದೇ" ಎಂದನು.

ಅದಕ್ಕೆ ಆ ಮಗು ಇಲ್ಲಾ ಒಡೆಯ, ನನ್ನ ಸಂತೋಷಕ್ಕಾಗಿ ನನಗೆ ಬಹುಮಾನ ಆಗಲೇ ಸಿಕ್ಕಾಗಿದೆಯಲ್ಲ, ನನಗೆ ನೂಕು-ನುಗ್ಗ ಲಿನಲ್ಲಿ ಸಂಕಟ ಪಡುವ ಅವಶ್ಯವಿಲ್ಲಾ ಎಂದಳು.

ಆ ಚಿಕ್ಕ ಮಗುವಿನ ಪ್ರೀತಿಯ ಮಾತು ಕೇಳಿ ಶ್ರೀಮಂತನಿಗೆ ಅತೀ ಸಂತೋಷವಾಯಿತು. ಅಂದೇ ಅವನು ಆ ಮಗುವನ್ನು ದತ್ತಕ ಪುತ್ರಿಯನ್ನಾಗಿ ಮಾಡಿಕೊಂಡನು. ಆಕೆಯು ತಾಯಿಗೆ ಮಾಸಾಶನವನ್ನು ಗೊತ್ತು ಮಾಡಿ ಅದರಂತೆ ನಡೆಯ ಹತ್ತಿದನು. ಆ ಮಗುವೇ ಮುಂದೆ ಶ್ರೀಮಂತನ ಉತ್ತರಾಧಿಕಾರಿಣಿ ಆದಳು.

ತಾಳ್ಮೆಗೆ ತಕ್ಕ ಫಲ ಸಿಕ್ಕೇ ಸಿಗುವದು.

Sri Vidyaranya Book Centre, Shringeri

CC-O. In Public Domain. Digitized by eGangotri

೫. ಸ್ವಾವಲಂಬನದಲ್ಲಿಯೇ ಸುಖದ ದಾರಿ

ಒಂದು ಹಳ್ಳಿಯಲ್ಲಿ ರೈತನೊಬ್ಬನು ಒಂದು ಆಕಳು ಒಂದು ಕುದುರೆಯನ್ನು ಸಾಕಿದ್ದನು. ಅವೆರಡೂ ಯಾವಾಗಲೂ ಕೂಡಿ ಕೊಂಡೇ ಮೇಯಲು ಹೋಗಿ ಮತ್ತು ಕೂಡಿಯೇ ಮನೆಗೆ ಬರುತ್ತಿದ್ದವು. ಆ ರೈತನ ಮನೆಯಲ್ಲಿ ಒಬ್ಬ ಅಗಸನಿರುತ್ತಿದ್ದನು. ಆ ಅಗಸನು ಒಂದು ಕತ್ತೆಯನ್ನು ಒಂದು ಆಡನ್ನು ಸಾಕಿದ್ದನು. ಈ ಪ್ರಾಣಿಗಳಾದರೂ ರೈತನ ಆಕಳು ಮತ್ತು ಕುದುರೆಯಂತೆಯೇ ಇರುತ್ತಿದ್ದವು.

ಹೀಗೆಯೇ ಒಂದೇ ಅಡವಿಯಲ್ಲಿ ನಾಲ್ಕೂ ಪ್ರಾಣಿಗಳು ಕೂಡಿ ಮೇಯುವದರಿಂದ ಆ ಪ್ರಾಣಿಗಳಲ್ಲಿ ಸ್ನೇಹ ಬೆಳೆಯಿತು. ಹೀಗಾಗಿ ಅವು ನಾಲ್ಕೂ ಒಟ್ಟಾಗಿಯೇ ಅಡವಿಗೆ ಹೋಗಿ ಹುಲ್ಲು ಮೇದು ಒಂದುಗೂಡಿಯೇ ಮನೆಗೆ ಮರಳುತ್ತಿದ್ದವು.

ಅದೇ ಅಡವಿಯಲ್ಲಿ ಒಂದು ಮೊಲವಿತ್ತು. ಅದು ದಿನವೂ ಬಂದು ಮೇದು ಹೋಗುವಈ ನಾಲ್ಕೂ ಪ್ರಾಣಿಗಳ ಗೆಳೆತನವನ್ನು ಕಂಡು ಯೋಚಿಸಹತ್ತಿತು. "ಇವರೆಲ್ಲರ ಗೆಳೆತನ ತಾನೂ ಮಾಡಿದರೆ ಬಹಳ ಒಳ್ಳೆದಾಗುತ್ತದೆ. ಇಂಥ ದೊಡ್ಡ ಪ್ರಾಣಿಗಳ ಜೊತೆ ಇದ್ದರೆ ಯಾವ ನಾಯಿಯೂ ನನ್ನನ್ನು ಹೀಡಿಸಲಾರವು."

ಈ ರೀತಿ ವಿಚಾರ ಮಾಡಿ ಆ ಮೊಲವು ದಿನನಿತ್ಯವೂ ಆ ನಾಲ್ಕೂ ಪ್ರಾಣಿಗಳ ಹತ್ತರ ಬರಲು ಪ್ರಾರಂಭ ಮಾಡಿತು. ಮೇಲಿಂದ ಮೇಲೆ ಅವುಗಳ ಹತ್ತರ ಬಂದು ಜಿಗಿದಾಡುವದು ಹುಲ್ಲು ಮೇಯುವದು ಮಾಡಿ ಆ ದೊಡ್ಡ ಪ್ರಾಣಿಗಳ ಗೆಳೆತನ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಗಳಿಸಿಕೊಂಡಿತು. ಈಗ ಆ ಮೊಲಕ್ಕೆ ತೀರಾ ಆನಂದ ವಾಯಿತು. ಈಗ ಯಾವ ಕೆಟ್ಟ ನಾಯಿಯ ಪೀಡೆಯೂ ತನಗಿಲ್ಲಾ ಎಂದು ಸೊಕ್ಕಿನಿಂದ ತಿರುಗಾಡಹತ್ತಿತು.

ಹೀಗಿರುವಾಗ ಒಂದು ದಿನ ನಾಯಿಯೊಂದು ಆ ಅಡವಿಗೆ ಬಂತು. ಮೊಲವನ್ನು ಕಂಡ ತಕ್ಷಣ ಅದರ ಬೆನ್ನು ಹತ್ತಿತು. ಮೊಲವು ಓಡಿ ಬಂದು ಆಕಳಿಗೆ ಬಿನ್ನವಿಸಿತು. "ನೋಡು ಗೋ ಮಾತೆಯೇ! ಈ ದುಷ್ಟನಾಯಿ ನಿರಪರಾಧಿಯಾದಂಥ ನನ್ನನ್ನು ಕೊಲ್ಲಲೆತ್ನಿಸುತ್ತದೆ. ನೀನು ನಿನ್ನ ಕೊಡುಗಳಿಂದಾ ಇದಕ್ಕೆ ತಕ್ಕಪಾಠ ಕಲಿಸುವಿಯಾ? ಅದಕ್ಕೆ ಆಕಳು ಏನು ಮಾಡಲಣ್ಣಾ, ನೀನು ಬಹಳ ತಡವಾಗಿ ನನ್ನ ಹತ್ತಿರ ಬಂದೆ. ನನ್ನ ಕರು ಹಸಿದಿರಬೇಕು ನನಗೀಗ ಬೇಗನೇ ಮನೆಗೆ ಹೋಗಬೇಕಾಗಿದೆ. ನೀನು ಕುದುರೆಯ ಹತ್ತಿರ ಹೋಗು ಎಂದಿತು. ತಕ್ಷಣವೇ ಮೊಲವು ಕುದುರೆ ಇದ್ದಲ್ಲಿಗೆ ಹೋಗಿ ಕಳಕಳಿಯಿಂದ ಮೊರೆಯಿಟ್ಟಿತು! ನೋಡಣ್ಣಾ ನಾವಿಬ್ಬರೂ ಇಲ್ಲಿ ಗೆಳೆಯರಾಗಿ ಮೇಯುತ್ತಿದ್ದೇವೆ. ಆ ನೀಚ ನಾಯಿಯು ನನ್ನನ್ನು ಕಾಡುತ್ತಿದೆ. ದಯಮಾಡಿ ನನ್ನನ್ನು ನಿನ್ನ ಬೆನ್ನ ಮೇಲೆ ಕೂಡಿಸಿಕೊಂಡು ಪಾರುಮಾಡು ಎಂದಿತು. ಅದಕ್ಕೆ ಕುದುರೆಯು: ನಿನ್ನಮಾತೇನು ಸರಿ ಅದೆ. ಆದರೆ ನನಗೆ ಕೂಡ್ರಲು ಆಗುವದಿಲ್ಲಾ ನಾನು ನಿಂತುಕೊಂಡೆ ನಿದ್ರೆ ಮಾಡುವದು. ಹೀಗಿರುವಾಗ ನೀನು ನನ್ನ ಮೇಲೆ ಕೂಡ್ರಲು ಸಾಧ್ಯವಾಗುವದಿಲ್ಲಾ. ಮೇಲಾಗಿ ನನ್ನ ಖುರಗಳು ಬೆಳೆದಿರುವದರಿಂದ ನನಗೆ ವೇಗವಾಗಿ ಓಡಲೂ ಆಗುವದಿಲ್ಲಾ ಎಂದಿತು.

ಮೊಲಕ್ಕೆ ಆಶೆಯೂ ನಿರಾಶೆ ಆಯಿತು. ಹೊತ್ತ ಕತ್ತೆಯ ಹತ್ತಿರ ಹೋಗಿ ಬಿನ್ನವಿಸಿತು: ನೋಡು ಮಿತ್ರ, ನೀನು ಈ

Sri Vidyabharathi Book Centre, Sringeri

 CC-O. In Public Domain. Digitized by eGangotri

ಪೀಡಕ ನಾಯಿಗೆ ಒಂದೆರಡು ಲತ್ತೆಯ ಪೆಟ್ಟು ಕೊಟ್ಟೆಯಾದರೆ ನನ್ನ ಪ್ರಾಣ ಉಳಿಯುತ್ತದೆ. ಅಷ್ಟು ಉಪಕಾರ ಮಾಡುತ್ತಿಯಾ ಅಂದಿತು. ಅದಕ್ಕೆ ಕತ್ತೆಯು ನೀನು ಹೇಳುವದು ಸರಿ. ಆದರೆ ನಾನು ಪ್ರತಿದಿನವೂ ಆಕಳು ಕುದುರೆ ಇವರ ಜೊತೆಗೇ ಮನೆಗೆ ಹೋಗುತ್ತೇನೆ. ಈಗ ಅವೆರಡೂ ಹೊರಟಿದ್ದಾರೆ. ಒಂದುವೇಳೆ ನಾನು ಅವರೊಂದಿಗೆ ಹೋಗದೇ ಹಿಂದೆ ಉಳಿದರೆ ನನ್ನ ಯಜಮಾನನು ನನಗೆ ಹೊಡೆದು–ಹೊಡೆದು ಪ್ರಾಣ ತೆಗೆಯುವನು. ಕ್ಷಮಿಸು ನಾನು ನಿಲ್ಲುವಂತಿಲ್ಲಾ ಎಂದಿತು.

ಹೀಗೆ ಮೊಲಕ್ಕೆ ಎಲ್ಲಿ ಕಂಡಲ್ಲಿಯೂ ನಿರಾಶೆಯ ಚಿನ್ಹಗಳು ಕಂಡು ಬಂದವು. ಉಪಾಯಗಾಣದೇ ಮೊಲಕ್ಕೆ ಅಲ್ಲಿಂದ ಪ್ರಾಣ ಉಳಿಸಲಿಕ್ಕೆ ಕಿತ್ತು ಓಡಬೇಕಾಯಿತು. ಓಡಿ–ಓಡಿ ಬಂದು ಒಂದು ಪೊದೆಯೊಂದರಲ್ಲಿ ಅವಿತುಕೊಂಡಿತು. ನಾಯಿಯು ಮೊಲವನ್ನು ಹುಡುಕಿ–ಹುಡುಕಿ ಬೇಸತ್ತು ಹೊರಟ ಹೋಯಿತು.

ನಾಯಿ ಹೋದ ಮೇಲೆ ಮೊಲವು ಪೊದೆಯಿಂದ ಹೊರಗೆ ಬಂದು ನಾಲ್ಕೂ ಕಡೆಗೆ ನೋಡಿ ನಿಡಿದಾದ ಉಸಿರು ಬಿಟ್ಟಿತು. ಕಡೆಗೆ ಪಾಠ ಕಲಿತು ಹೀಗೆಂದಿತು.

ಬೇರೆಯವರ ಮೇಲೆ ಭರವಸೆ ಇಡುವದು ಸರಿಯಲ್ಲ, ಸ್ವಾವಲಂಬನದಲ್ಲಿಯೇ ಸುಖದ ದಾರಿ ಉತ್ತಮ ಫಲಕಾರಿ!

Sri Vidyabharathi Book Centre, Sringeri

CC-O. In Public Domain. Digitized by eGangotri

೬. ಅತೀ ಶ್ರೇಷ್ಠವಾದ ದಾನ

ಪಾಂಡವಪುರವೆಂಬ ಒಂದು ಉತ್ತಮ ಹಳ್ಳಿ. ಅಲ್ಲಿಯ ಹಳ್ಳಿಯ ಹೊರಭಾಗದಲ್ಲಿ ಒಂದು ಪ್ರಾಚೀನ ದೇವಾಲಯವಿದ್ದಿತು. ಯಾವದೇ ಮಹತ್ತರ ಕಾರಣಕ್ಕಾಗಿಯೋ ಏನೋ ಅದು ಹಾಳು ಬಿದ್ದಿತ್ತು. ಒಂದು ದಿವಸ ಭಯಂಕರ ಬಿರುಗಾಳಿ ಬೀಸಿತು. ಖಿಡಲ್ ಖಿಡಲ್ ಎಂದು ಸಿಡಿಲು ಬಿದ್ದಿತು. ಧೋಧೋ ಎಂದು ಮಳೆ ಸುರಿಯಲಾರಂಭಿಸಿತು.

ಮೊದಲೇ ಹಾಳು ದೇವಾಲಯ. ಅಂಥ ಭಯಂಕರ ಗಾಳಿ, ಮಳೆ ಸಿಡಿಲಿನ ಆಘಾತದಿಂದಾಗಿ ಕೊಪ್ಪರಿಸಿ ಬಿದ್ದು ಬಿಟ್ಟಿತು. ಆದರೆ ಆ ದಿವಸವೇ ಮಳೆಯಲ್ಲಿ ಆಶ್ರಯಕ್ಕಾಗಿ ದೇವಾಲಯದ ಒಂದು ಮೂಲೆಯಲ್ಲಿ ತಂಗಿದ್ದ ಸಾಧುವಿಗೆ ಮಾತ್ರ, ಸುದೈವದಿಂದ ಏನೂ ಆಗಲಿಲ್ಲ. ಅವನು ತಂಗಿದ್ದ ಮೂಲೆ ಮಾತ್ರ ಸುರಕ್ಷಿತವಾಗಿ ಉಳಿದುಕೊಂಡಿತ್ತು.

ಸಾಧು ಯೋಚಿಸಿದ: ನಾನು ಇಲ್ಲಿ ಇರುವಾಗಲೇ ಈ ಹಾಳು ದೇವ ಮಂದಿರವು ಕುಸಿದು ಬಿದ್ದಿದೆ. ಆದರೆ ನಾನು ಹೀಗೆಯೇ ಬಿಟ್ಟು ಹೋಗದೇ ಇದನ್ನು ಕಟ್ಟಿಸಿಯೇ ನನ್ನ ಯಾತ್ರೆಯನ್ನು ಮುಂದುವರಿಸಬೇಕು ಎಂದುಕೊಂಡನು. ಹಾಗೇ ಸಾಧುವು ಬೆಳಗಿನ ಜಾವದಲ್ಲಿ ಎದ್ದು ಊರೊಳಗೆ ಹೋಗಿ, ದೇವಾಲಯದ ಪರಿಸ್ಥಿತಿ ತಿಳಿಸಿಹೇಳಿ ಮನೆ-ಮನೆಗೆ ಹಣ ವಸೂಲ ಮಾಡಿ ಕೂಡಿಸ ಹತ್ತಿದನು. ಪಾಂಡವಪುರ ಹೆಸರಿಗೆ ತಕ್ಕ ಹಳ್ಳಿ ಇತ್ತು. ಅಲ್ಲಿಯ ಜನರು ದೈವ ನಿಷ್ಠೆಯುಳ್ಳವರೇ ಆಗಿದ್ದರು. ಮೇಲಾಗಿ ಸಾಧುವು ವಿದ್ವಾಂಸನಾಗಿದ್ದನು. ಹೀಗಾಗಿ ಹಣವನ್ನು ಕೂಡಿಸುವದು ಸುಲಭ

Sri Vijayabharathi Book Centre, Mysore

CC-O. In Public Domain. Digitized by eGangotri

ವಾಯಿತು. ಮುಂದೆ ಸ್ವಲ್ಪ ಕಾಲದಲ್ಲಿಯೇ ದೇವಾಲಯದ ನಿರ್ಮಾಣವೂ ಆಯಿತು. ಆಮೇಲೆ ಮೂರ್ತಿಯ ಪ್ರತಿಷ್ಠಾಪನೆಯೂ ಮಹಾ ಉತ್ಸವದೊಂದಿಗೆ ಜರುಗಿತು. ಸರ್ವರಿಗೂ ಪ್ರಸಾದವನ್ನು ಹಂಚಲಾಯಿತು. ಎಲ್ಲ ಜನರೂ ಆನಂದ ಸಾಗರದಲ್ಲಿ ಮುಳುಗಿದರು.

ಸಾಯಂಕಾಲ ಜನಗಳ ಮಹಾಸಭೆ ಸೇರಿತು. ಸಾಧುಗಳು ಜನರಿಗೆ ಧನ್ಯವಾದಗಳನ್ನು ಅರ್ಪಿಸಲು ಎದ್ದು ನಿಂತರು. ಕೈಯಲ್ಲಿ ಒಂದು ಯಾದಿಯನ್ನು ಹಿಡಿದು ಸಾಧು ಹೀಗೆ ನುಡಿದರು: ಎಲ್ಲ ದಾನಗಳಲ್ಲಿ ಅತೀ ಶ್ರೇಷ್ಠವಾದ ದಾನ ಒಬ್ಬ ಮುದುಕಿಯದಾಗಿದೆ. ಆಕೆಯೇ ಸ್ವತಃ ಬಂದು ಕೊಟ್ಟು ಹೋಗಿದ್ದಾಳೆ. ಆಗ ಜನರಿಗೆ ಅನಿಸಿತು. ಯಾವದೇ ಒಬ್ಬ ಮುದುಕಿ ನೂರು–ಇನ್ನೂರು ರೂಪಾಯಿ ಕೊಟ್ಟಿರಬಹುದು. ಆದರೆ, ನೂರು ರೂಪಾಯಿ ದಾನ ಮಾಡಿದವರು ಬಹಳೇ ಇದ್ದಾರೆ. ಆದರೂ ಸಾಧುಗಳ ಮಾತು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು.

ಸಾಧುಗಳು ಮುಂದುವರಿದು ಹೇಳಿದರು:

"ಆ ಮುದುಕಿಯು ನಾಲ್ಕಾಣೆ ಮತ್ತು ತುಸು ಅಕ್ಕಿಯನ್ನು ನನಗೆ ದಾನವಿತ್ತಿದ್ದಳು" ಎಂದರು.

"ಸಾಧುಗಳ ಮಾತು ಜನರಿಗೆ ಚೇಷ್ಟೆ ಅನಿಸಿತು. ಆದರೂ ಸಾಧುಗಳು ಮಾತನ್ನು ಮುಂದುವರಿಸುತ್ತ ಆಕೆ ಬೇರೆಯವರ ಮನೆಯಲ್ಲಿ ಹಿಟ್ಟು ಬೀಸಿ, ಹೊಟ್ಟೆ ತುಂಬಿಕೊಳ್ಳುತ್ತಾಳೆ. ಈ ಹಣವನ್ನು ಸಂಗ್ರಹಿಸಲು ಆಕೆಗೆ ಅನೇಕ ತಿಂಗಳುಗಳು ಹಿಡಿದಿವೆ. ಇವೇ ಅವಳಸರ್ವ ನಿಧಿ-ಆಸ್ತಿ ಆಗಿದ್ದಿತು. ಹೀಗೆ ಆಕೆ ತನ್ನ ಸರ್ವಸ್ವವನ್ನೇ ದಾನ ಮಾಡಿದ್ದ ಆ ವೃದ್ಧ ಮಾತೆಗೆ ನಾನು ನಮಸ್ಕರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುತ್ತೇನೆ" ಎಂದರು. ಸಾಧುವಿನ ಮಾತು ಕೇಳಿ ಜನರೆಲ್ಲರೂ ತಲೆ ತಗ್ಗಿಸಿ ಅವರನ್ನು ಕೊಂಡಾಡಿದರು.

ನಿಜವಾದ ಮನಸ್ಸಿನಿಂದ ಮಾಡಿದ ಆ ಮುದುಕಿಯ ಸರ್ವಸ್ವವಾದ ದಾನವೇ ನಿಜಕ್ಕೂ ಅತೀ ಶ್ರೇಷ್ಠವಾದ ದಾನವೇ ಆಗಿದ್ದಿತು.

ದಾನಿಗಳೇ...ನೀವೂ ಸಹಾ ಮುದುಕಿಯ ಹಾಗೆ ಶ್ರೇಷ್ಠ ದಾನಿಗಳಾಗಿರಿ.

●●

Sri Vidyabharathi Book Centre, Sringeri

CC-O. In Public Domain. Digitized by eGangotri

೭. ಸಜ್ಜನರ ಸಂಗ ಹೆಚ್ಚೀನು ಸವಿದಂತೆ

ಹಿಂದೊಮ್ಮೆ ಮಣಿಪುರ ಎಂಬ ಊರು. ಆ ಊರಲ್ಲಿ ಒಬ್ಬ ಕಳ್ಳನಿದ್ದು ಜನರನ್ನು ಹೊಡೆದು–ಬಡೆದು ಅವರ ಹಣ, ಆಭರಣ ದೋಚುವದೇ ಅವನ ಗುರಿಯಾಗಿತ್ತು. ಅಷ್ಟೇಅಲ್ಲ, ಅವನ ಜೀವನದ ಕಸಬು ಆಗಿದ್ದಿತು. ಅವನು ಮಾಡಿದ ಪಾಪಗಳಿಗೆ ಲೆಕ್ಕವೇ ಇರಲಿಲ್ಲ. ಒಮ್ಮೆ ಆತನಿಗೆ ಪ್ರವಚನ ಹಾಗೂ ಪುಣ್ಯಕಥೆ ಹೇಳುತ್ತಿದ್ದ ಸಾಧು ಪುರುಷರು ಕಣ್ಣಿಗೆ ಬಿದ್ದರು. ಕುತೂಹಲ ವಶದಿಂದ ಆತನೂ ಅಲ್ಲಿಗೆ ಹೋದನು. ಅದೇ ವೇಳೆಯಲ್ಲಿ ಶ್ರೀಮಂತರೂ ಅಲ್ಲಿ ಪ್ರವಚನ ಕೇಳಲು ಆಗಮಿಸಿದ್ದರು.

ಕಳ್ಳ ಯೋಚಿಸಿದ: ಈ ಪುಣ್ಯಕಥೆ ಕೇಳುವದು ಮುಗಿಯುವ ಹೊತ್ತಿಗೆ ಸಾಕಷ್ಟು ರಾತ್ರಿ ಆಗುತ್ತದೆ. ಆಗ ಮನೆಗೆ ಹೋಗುವ ಶ್ರೀಮಂತರಲ್ಲಿ ಯಾವನಾದರೊಬ್ಬನ ಮೇಲೆ ದಾಳಿ ಮಾಡಬೇಕು. ಎಂದನು. ಆದರೆ, ದೈವೇಚ್ಛೆ ಬೇರೆಯೇ ಇತ್ತು. ಅದರ ಜೊತೆಗೆ ಸಂಗತಿಯ ಪರಿಸರದ ಫಲ ಎಂದು ಹೇಳುತ್ತಾರಲ್ಲ ಅದು ಸುಳ್ಳಲ್ಲ. ಒಂದೆಡೆ ಪುಣ್ಯ ಕಥೆ ಮತ್ತೊಂದು ಕಡೆ ಅಲ್ಪ ಕಾಲವಾದರೂ ಸಜ್ಜನರ ಸಂಗ– ಇವುಗಳ ಪರಿಣಾಮವು ಆತನ ಹೃದಯಕ್ಕೆ ತಾಕಿತು.

ಕಳ್ಳನಿಗೆ ಸಾಧುಗಳ ವರ್ತನೆ ಅವರ ಹಾವ–ಭಾವ ನೋಡಿ ಬಹಳ ಭಯವುಂಟಾಯಿತು. ಆತನು ಎಲ್ಲ ಜನರೂ ಹೋದ ನಂತರ ಸಾಧುಗಳನ್ನು ಸಮೀಪಿಸಿ ಕೇಳಿದ:

"ಮುನಿವರ್ಯ ನಾನು ಒಬ್ಬ ಕಳ್ಳನು. ಕಳ್ಳತನ ಮಾಡುವ ದನ್ನು ಬಿಡುವದು ಎನ್ನಿಂದಾಗದು. ಇಂಥವನಾದ ನನಗೆ ಉದ್ಧಾರದ

Sri Vidyabharathi Book Centre, Sringeri

 CC-O. In Public Domain. Digitized by eGangotri

ದಾರಿಯಾದರೂ ಇದೆಯೇ" ಎಂದನು. ಸಾಧುಗಳು ಆಲೋಚಿಸಿ, "ಏಕಿಲ್ಲ ? ಇದ್ದೇ ಇದೆ. ಸುಳ್ಳಾಡುವದನ್ನು ನಿಲ್ಲಿಸಿದರೆ ಸಾಕು ಎಂದರು. ಆಗ ಕಳ್ಳನು ಓಹೋ" ಎಂದು ಒಪ್ಪಿಕೊಂಡು ಸಾಧುಗಳ ಕಾಲಿಗೆ ಬಿದ್ದು ಅಲ್ಲಿಂದ ಮುಂದೆ ಸಾಗಿದನು.

ಅಷ್ಟು ಹೊತ್ತಿಗೆ ಪುರಾಣಕ್ಕೆ ಬಂದವರೆಲ್ಲಾ ತಮ್ಮ ತಮ್ಮ ಮನೆ ಸೇರಿದ್ದರು. ಕಳ್ಳನು ಏನು ಮಾಡಬೇಕು ಎಂದು ಆಲೋಚಿಸಿ, ಕೊನೆಗೆ ಅರಮನೆಯಲ್ಲಿಯೇ ಕಳ್ಳತನ ಮಾಡುವ ನಿರ್ಧಾರಕ್ಕೆ ಬಂದ ತಕ್ಷಣವೇ ಅರಮನೆ ದಾರಿ ಹಿಡಿದನು. ಅರಮನೆ ಸಮೀಪಿಸಿದಾಗ ಅಲ್ಲಿಯ ಕಾವಲುಗಾರ ಅವನನ್ನು ತಡೆದು ಯಾರು ನೀನು ಎಂದನು. ಅದಕ್ಕೆ ಕಳ್ಳನು ಸುಳ್ಳು ಹೇಳುವದನ್ನು ಆಗಲೇ ಬಿಟ್ಟಾಗಿದ್ದಿತು. ನಾನು 'ಕಳ್ಳ' ಎಂದನು. ಅದನ್ನು ಕೇಳಿ ಕಾವಲುಗಾರನು ಅವಾಕ್ಕಾದ. ಅವನು ಕಳ್ಳನ ಬಗ್ಗೆ ಯಾರೋ ಅರಮನೆಗೆ ಸಂಬಂಧಿಸಿದವರೇ ಇರಬೇಕು, ಯಾರೆಂದು ಕೇಳಿದ್ದಕ್ಕೆ ಅಸಮಾಧಾನದಿಂದ ಹಾಗೆ ಹೇಳುತ್ತಿದ್ದಾರೆ ಎಂದು ತಿಳಿದು ಅವನಿಗೆ ದಾರಿ ಬಿಡುತ್ತ ಹೇಳಿದ: ಮಹಾಶಯರೇ ನಮಸ್ಕಾರ, ನಿಮಗೆ ಹಾಗೇ ಕೇಳಿದೆ ಅಸಮಾಧಾನಗೊಳ್ಳದೇ ಹೋಗಿರಿ. ಕಳ್ಳನು ನೇರವಾಗಿ ಒಳಗೆ ಹೊಕ್ಕು ಒಂದು ದೊಡ್ಡ ಪೆಟ್ಟಿಗೆಯನ್ನೇ ತಲೆಯ ಮೇಲೆ ಹೊತ್ತುಕೊಂಡು ಹೊರಗೆ ಹೊರಟ.

ಕಾವಲುಗಾರ ಪುನಃ ಕೇಳಿದ:
ಏನನ್ನು ಒಯ್ಯುತ್ತಿದ್ದೀರಿ ?
"ಆಭರಣಗಳ ಪೆಟ್ಟಿಗೆ" ಕಳ್ಳ ಉತ್ತರಿಸಿದ.

"ಯಾರನ್ನು ಕೇಳಿ ಒಯ್ಯುತ್ತಿದ್ದೀರಿ ? ಕಾವಲುಗಾರ ಕೇಳಿದ. ಕಳ್ಳನಿಗೆ ಸುಳ್ಳು ಹೇಳಲು ಸಾಧ್ಯವಿರಲಿಲ್ಲ. ಆಗಲೇ ಸತ್ಯದ ಪ್ರಭಾವ ತೋರಿಸಿದ್ದ. ನಿಜವೆಂದು ಹೇಳಿದ್ದರೆ ಕಾವಲುಗಾರ ಒಳಗೇ

Sri Vidyabharathi Book Centre, Bangalore

 CC-O. In Public Domain. Digitized by eGangotri

ಬಿಡುತ್ತಿರಲಿಲ್ಲ" ಎಂದು ಆತ ಭಾವಿಸಿದ. ಅದಕ್ಕೆ ಅವನು ಹೆದರದೇ ಸತ್ಯದ ಪ್ರಭಾವದ ಮೇಲೆಯೇ ನಂಬಿಕೆ ಇಟ್ಟು ಹೇಳಿದ:

"ಕಳವು ಮಾಡಿ ಒಯ್ಯುತ್ತಿದ್ದೇನೆ" ಈ ಉತ್ತರ ಕೇಳಿ ಕಾವಲು ಗಾರನು ಏನೋ ಅಂತಿಂಥ ಸಾಮಾನು ಇರಬೇಕು. ಸಿಡುಕಿನ ಸ್ವಭಾವದ ವ್ಯಕ್ತಿ ಎಂದು ತೋರುತ್ತದೆ. ಹೋಗಲಿ ಎಂದು ಕೊಂಡು ಕಳ್ಳನಿಗೆ ದಾರಿ ಬಿಟ್ಟನು.

ಬೆಳಗಾಗುವದರೊಳಗೆ ಅರಮನೆಯಲ್ಲಿ ಗೊಂದಲವೇ ಗೊಂದಲ ! ಆಭರಣಗಳ ಪೆಟ್ಟಿಗೆ ಮಾಯವಾಗಿದೆ !

ಅರಮನೆಯ ಕಾವಲುಗಾರನಿಗೆ ಮಹಾರಾಜರು ಕರೆದುಕೇಳಿ ದಾಗ್ಗೆ ಕಾವಲುಗಾರನು ನಿಜ ಸಂಗತಿಯನ್ನು ಬಿತ್ತರಿಸಿದನು. ತಕ್ಷಣವೇ ಮಹಾರಾಜರು ಸಿಪಾಯಿಗಳಿಗೆ ಆಜ್ಞೆ ಮಾಡಿ ಆ ಕಳ್ಳ ನನ್ನು ಹಿಡಿದು ತರಿಸಿದರು.

ಆ ಕಳ್ಳನ ಸತ್ಯವಂತಿಕೆಯನ್ನು ಅರಸರು ಬಹಳೇ ಮೆಚ್ಚಿ ಕೊಂಡು ಅವನನ್ನೇ ತಮ್ಮ ಅರಮನೆಯ ಪ್ರಮುಖ ಕಾವಲುಗಾರ ನನ್ನಾಗಿ ನಿಯಮಿಸಿದರು. ಮುಂದೆ ಆ ಕಳ್ಳನಿಗೆ ಕಳ್ಳತನ ಮಾಡುವ ಅವಶ್ಯಕತೆಯೇ ಬೀಳಲಿಲ್ಲ.

ಸಜ್ಜನರ ಸಂಗ ಮಾಡಿದಲ್ಲಿ ಹೆಜ್ಜೇನು ಸವಿದಂತೆ ಸನ್ಮಾರ್ಗಿ ಆಗುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

೮. ಪಶ್ಚಾತ್ತಾಪವೇ ಪಾಪದ ನಿವಾರಣೆ

ಕನಕಪುರವೆಂಬ ಒಂದು ಚಿಕ್ಕ ಹಳ್ಳಿ. ಅಲ್ಲಿಯ ಶಾಲೆಯೊಂದರಲ್ಲಿ ಒಬ್ಬ ಬಾಲಕನು ಬಹು ದುಷ್ಟ ಸ್ವಭಾವದವನಾಗಿದ್ದನು. ಯಾರಿಗಾದರೂ ಬೈಯದೇ ಅಥವಾ ಜಗಳ ತೆಗೆಯದೇ ಅತನಿಗೆ ಸಮಾಧಾನವೇ ಆಗುತ್ತಿರಲಿಲ್ಲ.

ಹೀಗಿದ್ದಾಗ ಒಂದು ದಿನ ಅತನು ಒಂದು ಗಿಡದ ಬುಡದಲ್ಲಿ ಕುಳಿತಿದ್ದ ಸನ್ಯಾಸಿಯನ್ನು ಕಂಡನು. ತಕ್ಷಣ ಅವನನ್ನು ಬೈಯ್ದು ಓಡಲು ಸಿದ್ಧವಾದನು. ಆದರೆ, ಅವನು ತಿಳಿದಂತೆ ಸನ್ಯಾಸಿ ಅವನ ಹಿಂದೆ ಹಿಡಿಯಲು ಬರಲಿಲ್ಲಾ. ಹಾಗೇನಾದರೂ ಸನ್ಯಾಸಿ ಹಿಡಿಯಲು ಬಂದರೆ ಬಲು ಮೋಜು ಆಗುತ್ತದೆಂದು ಅತ ತಿಳಿದು ಕೊಂಡಿದ್ದ. ಆದರೆ, ಹಾಗೆ ಆಗದೇ ಸನ್ಯಾಸಿ ಮೌನವಾಗಿಯೇ ಉಳಿದು ಬಿಟ್ಟನು. ಹೀಗಾಗಿ ಬಾಲಕನಿಗೆ ನಿರಾಶೆ ಆಯಿತು. ಆ ಬಾಲಕನು ಸನ್ಯಾಸಿಯ ಹತ್ತಿರ ಹೋಗಿ ಮತ್ತೆ ಬಾಯಿಗೆ ಬಂದ ಹಾಗೆ ಬೈಯ್ಯತೊಡಗಿದನು, ಅಷ್ಟಾದರೂ ಸನ್ಯಾಸಿ ಕಣ್ಣು ಮುಚ್ಚಿ ಧ್ಯಾನದಲ್ಲಿ ಮಗ್ನನಾದ. ಯಾವದೋ ಪ್ರಾಣಿ ಇಲ್ಲವೆ ಪಶು ಧ್ವನಿ ಮಾಡುತ್ತಿರಬಹುದು ಎಂದು ತಿಳಿದುಕೊಂಡ.

ಅಷ್ಟರಲ್ಲಿ ಮತ್ತೆ ಅಲ್ಲಿ ನಿಂತ ಮತ್ತೊಬ್ಬ ಬಾಲಕನು ಸನ್ಯಾಸಿಯನ್ನು ಬೈಯ್ಯುವದು ನೋಡಿ, ನೋಡಜ್ಜಾ ಆತನು ನಿನಗೆ ಬೈಯ್ಯುತ್ತಿದ್ದಾನೆ ಎಂದನು. ಅದಕ್ಕೆ ಸನ್ಯಾಸಿಯು ಇರಲಿ ಬಿಡು ಮಗು ಅವನೇನೋ ಬೈಯ್ಯುತ್ತಾನೆ. ಆದರೆ, ನಾನೆಲ್ಲಿ ಅವುಗಳನ್ನು ತೆಗೆದುಕೊಳ್ಳುತ್ತೇನೆ ? ನಾನು ಅವುಗಳನ್ನು ತಕ್ಕೊಳ್ಳುವದಿಲ್ಲವಾದ್ದರಿಂದ ಅವೆಲ್ಲವೂ ಪುನಃ ತಿರುಗಿ ಅವನಿಗೇ ಆಗುತ್ತವೆ ಎಂದನು.

Sri Vidyabharathi Book Centre, Hampi

CC-O. In Public Domain. Digitized by eGangotri

ಅದಕ್ಕೆ ಬಾಲಕನು, ಆದರೆ. ತಾತಾ ಅವನು ಬಹಳ ಕೆಟ್ಟ ಬೈಗಳು ಬೈಯ್ಯುತ್ತಿದ್ದಾನೆ ಎಂದನು. ಅದಕ್ಕೆ ಸನ್ಯಾಸಿಯು: ಒಳ್ಳೆಯದು ಮಗು, ಆ ಕೆಟ್ಟ ಬೈಗಳಗಳು ನನಗಂತೂ ಮುಟ್ಟಲಾರವು, ತಿರುಗಿ ಅವನಿಗೇ ಮುಟ್ಟುತ್ತವೆ. ಅವನ ಬಾಯಿ ಹೊಲಸಾಗುತ್ತದೆ ಅಂದನು. ಬೈಯ್ಯುವ ದುಷ್ಟ ಹುಡುಗ ಸನ್ಯಾಸಿಯ ಮಾತು ಕೇಳುತ್ತಲೇ ಇದ್ದ. ಆಗ ಆತನ ಮನಸ್ಸು ಏನೋ ಒಂದು ತರಹಾ ಆಗಿ ಎದೆ ಮಿಡುಕಿತು.

ಈ ಸನ್ಯಾಸಿಯು ನಿಜವಾದುದನ್ನೇ ಹೇಳುತ್ತಿದ್ದಾನೆ. ಈತ ಹೇಳುವಂತ ಬೈಗಳು ಎಲ್ಲಾ ನನ್ನಲ್ಲಿಯೇ ಉಳಿದಿವೆ. ಅಯ್ಯೋ ಎಂಥಾ ಕೆಟ್ಟ–ಕೆಟ್ಟ ಬೈಗಳು ಬೈದೆನಲ್ಲಾ ಎಂದು ನೊಂದು–ಬೆಂದು ಪಶ್ಚಾತ್ತಾಪ ಪಟ್ಟನು. ಆತ ಹಾಗೆಯೇ ಮೆಲ್ಲನೇ ಸನ್ಯಾಸಿಯ ಹತ್ತಿರ ಹೋಗಿ ಹೇಳಿದನು:

"ಅಪ್ಪಾ, ನನ್ನ ಈ ವರ್ತನೆ ಈ ದೋಷ ಈ ಪಾಪದ ನಿವಾರಣೆ ಹೇಗೆ ಮಾಡಿಕೊಳ್ಳಲಿ ದಯಮಾಡಿ ದಾರಿ ತೋರಿಸಿರಿ" ಎಂದನು. ಆಗ ಸನ್ಯಾಸಿಯು ಮುಗುಳುನಗೆ ಬೀರಿ ಮಗು, "ಪಶ್ಚಾತ್ತಾಪವೇ ಪಾಪದ ನಿವಾರಣೆ" ನೀನು ಪಶ್ಚಾತ್ತಾಪಪಟ್ಟು ನೊಂದು ಮತ್ತೆ ಹೀಗೆ ಮಾಡುವದಿಲ್ಲವೆಂದು ಪ್ರತಿಜ್ಞೆ ಮಾಡುವದರಿಂದ ಈ ಪಾಪ ಪರಿಹಾರವಾಗಿ ನೀನು ಪರಿಶುದ್ಧನಾಗುತ್ತೀ ಎಂದು ಬೋಧಿಸಿದನು.

ಮನುಷ್ಯನಿಗೆ ಪಶ್ಚಾತ್ತಾಪವೇ ಪಾಪದ ನಿವಾರಣೆಯ ಮಂತ್ರವಾಗಿದೆ.

●●

Sri Vidyabharathi Book Centre, Sringeri

CC-O. In Public Domain. Digitized by eGangotri

೯. ಆಶೆ ಬುರುಕ ಮಂಗ

ಮಂಗವೊಂದು ದಿನಾಲೂ ಮನೆ-ಮನೆಗೆ ಬಂದು ಏನಾದರೂ ಗೊಂದಲ ಮಾಡುತ್ತಿತ್ತು. ಅರಿವೆ ಹರಿಯುವದು, ಆಹಾರ ಪಾತ್ರೆ ಒಯ್ಯುವದು, ಮಕ್ಕಳಿಗೆ ಹೆದರಿಸುವದು ಹೀಗೆಲ್ಲಾ ಕಿಡಿಗೇಡಿತನ ಮಾಡೇ ಮಾಡುತ್ತಿತ್ತು. ತಿನ್ನುವ ವಸ್ತು ಒಯ್ದರೆ ಜನರು ಒಯ್ಯಲಿ ಬಿಡು ಎಂದು ಸುಮ್ಮನಿದ್ದರೆ ದಿನ–ದಿನಕ್ಕೆ ಅದರ ಉಪದ್ರವ ಹೆಚ್ಚಾಯಿತು. ಹೀಗಾಗಿ ಮನೆಯವರ ಸಹನೆ ಮೀರಿತು.

ಒಂದು ದಿವಸ ಒಂದು ಮನೆಯ ಯಜಮಾನ ಈ ಕಿಡಿಗೇಡಿ ಆಶೆ ಬುರುಕ ಮಂಗನನ್ನು ಹಿಡಿಯಲು ಒಂದು ಉಪಾಯ ಕಂಡು ಹಿಡಿದ. ಆತ ಒಂದು ಸಣ್ಣ ಬಾಯಿಯ ಗಡಿಗೆ ತರಿಸಿ, ಅದರಲ್ಲಿ ಕಡ್ಲಿ, ಸೇಂಗಾ, ಪುಠಾಣಿ ಹಾಕಿ ಮನೆಯಲ್ಲಿ ಅದನ್ನು ಕಂಠದ ವರೆಗೆ ಹುಗಿದು ಅದನ್ನು ಹಾಗೆಯೇ ತೆರೆದು ಬಿಟ್ಟ. ಮನೆಯ ಜನರು ಅಲ್ಲಿಂದ ದೂರ ಸರಿದರು.

ಪ್ರತಿದಿನದಂತೆ ಆ ಮಂಗವು ಯಾರ ಹೆದರಿಕೆ ಇಲ್ಲದೇ ಮನೆಯೊಳಗೇ ಬಂದಿತು. ಕೆಲ ಸಮಯ ಅತ್ತಿತ್ತ ಕುಣಿದಾಡಿತು, ಒಮ್ಮೆಲೇ ಹುಗಿದ ಗಡಿಗೆ ಅದರ ಕಣ್ಣಿಗೆ ಬಿತ್ತು. ಹತ್ತಿರ ಬಂದು ಇಣಕಿ ನೋಡಿತು. ಕಡ್ಲಿ, ಸೇಂಗಾ, ಪುಠಾಣಿ ! ಮಂಗನ ಬಾಯಲ್ಲಿ ನೀರು ಬಂತು. ಅದನ್ನು ತೆಗೆದು ಕೊಳ್ಳಲು ಅದು ಗಡಿಗೆಯಲ್ಲಿ ಕೈ ಹಾಕಿತು. ಮುಷ್ಟಿ ತುಂಬಾ ಕಾಳು ತೆಗೆದುಕೊಂಡಿತು. ಆದರೆ, ಗಡಿಗೆಯ ಬಾಯಿ ಅಗಲ ಕಡಿಮೆ ಇದ್ದುದರಿಂದ ತುಂಬಿದ ಮುಷ್ಟಿಯನ್ನು ಹೊರಗೆ ತೆಗೆಯುವದು ಸಾಧ್ಯವಾಗಲಿಲ್ಲ. ಆದರೂ

Sri Vidyabharathi Book Centre, Sirsi

CC-O. In Public Domain. Digitized by eGangotri

ಕಾಳು ತುಂಬಿದ ಮುಷ್ಟಿಯನ್ನೇ ಹೊರಗೆ ತೆಗೆಯಬೇಕೆಂದು ಮಂಗ ಒದ್ದಾಡ ಹತ್ತಿತು, ಕೂಗಾಡ ಹತ್ತಿತು. ಏನೇ ಆದರೂ ತುಂಬಿದ ಮುಷ್ಟಿ ಬರಿದಾಯಿತು.

ಅಷ್ಟರಲ್ಲಿ ಮನೆಯ ಯಜಮಾನನು ಜಪ್ಪಿಸಿ ಬಂದು, ಮಂಗನ ಕಾಲಿಗೆ ಹಗ್ಗ ಕಟ್ಟಿದನು. ಆಮೇಲೆ ಅದನ್ನು ಚೆನ್ನಾಗಿ ಥಳಿಸಿ ದೂರ ಕಳುಹಿಸಿದನು. ಹೀಗೆ ಕಿಡಿಗೇಡಿ ಮಂಗ ಆಶೆಗೆ ಬಿದ್ದು ಬಂಧನಕ್ಕೆ ಒಳಗಾಯಿತು.

ಆಶಾವಾದಿಗಳೇ: ಅತೀ ಆಶೆ ಬಲು ಕೆಡಕು

Sri Vidyabharathi Book Centre, Sringeri

CC-O. In Public Domain. Digitized by eGangotri

೧೦. ಹಿರಿಯರ ಮಾತು ವೀರಬಾರದು

ಒಂದು ದೊಡ್ಡ ಅರಣ್ಯ, ಅದಕ್ಕೆ ಸಮೀಪದಲ್ಲಿ ಒಂದು ಬೆಟ್ಟ. ಬೆಟ್ಟದ ಪಕ್ಕದಲ್ಲಿಯೇ ಜುಳು-ಜುಳು ಹರಿಯುವ ಸಣ್ಣ-ಪುಟ್ಟ ಹೊನಲುಗಳಿದ್ದವು. ಅರಣ್ಯದಲ್ಲಿ ಅನೇಕ ಪಶು-ಪಕ್ಷಿಗಳು ವಾಸವಾಗಿದ್ದವು. ಬೆಟ್ಟದ ಗವಿಯೊಂದರಲ್ಲಿ ಒಂದು ಸಿಂಹವು ತನ್ನ ಸಿಂಹಿಣಿ ಹಾಗೂ ಎರಡು ಮರಿಗಳೊಂದಿಗೆ ವಾಸವಾಗಿತ್ತು.

ಆ ಸಿಂಹ ದಂಪತಿಗಳು ತಮ್ಮ ಮರಿಗಳನ್ನು ಬಹಳ ಪ್ರೀತಿಸುತ್ತಿದ್ದವು. ಮರಿಗಳು ತಮ್ಮೊಡನೆ ತಿರುಗಾಡಲು ಇಚ್ಛಿಸುತ್ತಿದ್ದವು. ಅವುಗಳ ತೃಪ್ತಿಗಾಗಿ ಅವನ್ನೂ ತೀರ ಚಿಕ್ಕವಾಗಿದ್ದರಿಂದ ಅಲ್ಲಿಯೆ ಆಟ್ಟೇ ಸುತ್ತಾಡಿಸುತ್ತಿದ್ದವು. ಆದರೆ, ಬೇಟೆಗೆ ದೂರ ಹೋಗುವ ಪ್ರಸಂಗ ಬಂದಾಗ ಮರಿಗಳನ್ನು ಗವಿಯಲ್ಲಿಯೇ ಬಿಟ್ಟು ಹೋಗುತ್ತಿದ್ದವು.

ಸಿಂಹ ದಂಪತಿಗಳು ತಮ್ಮ ಮರಿಗಳಿಗೆ ಮೇಲಿಂದ ಮೇಲೆ ಬುದ್ಧಿಯ ಮಾತುಗಳನ್ನು ಹೇಳುತ್ತಿದ್ದವು. ಅವುಗಳಿಗೆ ಗವಿಯಿಂದ ಹೊರಗೆ ಬೀಳದೇ ಹಾಗೆ ನೋಡಿಕೊಳ್ಳುತ್ತಿದ್ದವು. ಆದರೆ, ಹಿರಿಯ ಮರಿಗೆ ತಾಯಿ-ತಂದೆಗಳ ಈ ರೀತಿಯ ಬಂಧನದಲ್ಲಿರುವದು ಎಳ್ಳಷ್ಟೂ ಸೇರುತ್ತಿರಲಿಲ್ಲ.

ಒಂದು ದಿನ ತಾಯಿ-ತಂದೆ ಬೇಟೆಗೆ ಹೋದಾಗ ಹಿರಿಯ ಮರಿಯು ನಡೆಯಪ್ಪ ಸ್ವಲ್ಪ ಸುತ್ತಾಡಿಕೊಂಡು ನೀರು ಕುಡಿದು ಬಂದು ಬಿಡೋಣ. ಹಾಗೇ ಅಲ್ಲಿ ಮೇಯಲು ಬಂದ ಚಿಗರೆಗಳನ್ನು ಹೆದರಿಸೋಣ, ಬಲು ಮೋಜು ಅನಿಸುತ್ತದೆ ಎಂದಿತು.

Vidyabharathi Book Centre, Sringeri

 CC-O. In Public Domain. Digitized by eGangotri

ಅದಕ್ಕೆ ಕಿರಿಯ ಮರಿಯು "ಅಪ್ಪ ಹೇಳಿಲ್ಲವೇ–ಒಬ್ಬರೇ ಗವಿಯಿಂದ ಹೊರ ಹೋಗ ಬೇಡಿರೆಂದು, ಆ ಹಳ್ಳದ ಕಡೆಗಂತೂ ಹೋಗಲಿಕ್ಕೇ ಬೇಡವೆಂದು ಹೇಳಿದ್ದಾರೆ. ಅಪ್ಪ ಬಂದ ಮೇಲೆಯೇ ಅಲ್ಲಿ ಹೋಗಿ ನೀರು ಕುಡಿದು ಬರೋಣ ಎಂದಿತು. ಆದಕ್ಕೆ ಹಿರಿಯ ಮರಿಯು: ನನಗೆ ನೀರಡಿಕೆ ಬಹಳೇ ಆಗಿದೆ. ಎಲ್ಲಾ ಪ್ರಾಣಿಗಳು ನಾವೆಂದರೆ ಹೆದರುತ್ತವೆ. ಹೀಗಿರುವಾಗ ನಾವೇಕೆ ಹೆದರಬೇಕು ? ಎಂದಿತು.

ಹಿರಿಯ ಮರಿಗೆ ತಾನೊಬ್ಬನೇ ಹೊರಗೆ ಹೋಗಿ ತನ್ನ ಸಾಹಸ ಕಾರ್ಯ ತೋರಿಸಬೇಕೆಂಬ ಲವಲವಿಕೆ ಬಹಳ ಆಗಿತ್ತು. ಅಂತೆಯೇ ಅದು ನೀರಡಿಕೆಯ ಕಾರಣ ಮುಂದೆ ಮಾಡಿತು. ಆದರೆ, ಕಿರಿಯ ಮರಿಗೆ ತಾಯಿ–ತಂದೆಗಳ ಮಾತು ಮೀರಿ ನಡೆಯುವದು ಯೋಗ್ಯವೆನಿಸಲಿಲ್ಲಾ, ಅದು ಹಿರಿಯ ಮರಿ ಕುರಿತು ಹೇಳಿತು: ನೀನೇನೇ ಹೇಳು ನಾನು ತಾಯಿ–ತಂದೆಗಳ ಮಾತು ಮನ್ನಿಸುತ್ತೇನೆ. ಒಬ್ಬರೇ ಹೋಗುವುದೆಂದರೆ ನನಗೇಕೋ ಹೆದರಿಕೆ ಆಗುತ್ತದೆ. ಥೂ, ನೀನು ಭಾರೀ ಪುಕ್ಕನು, ಇಲ್ಲಿಯೇ ಗವಿಯಲ್ಲಿ ಕೊಳೆ ನೋಡುತ್ತಿರು, ನಾನು ಹೋಗಿ ಬರುತ್ತೇನೆ ಎಂದಿತು ಹಿರಿಯ ಮರಿಯು. ಹೀಗೆ ಹೇಳಿ ಗವಿಯಿಂದ ಹೊರಬಿದ್ದು ಹಳ್ಳದ ಹತ್ತಿರಕ್ಕೆ ಹೋಗಿ ಸಾಕಷ್ಟು ನೀರು ಕುಡಿದು, ಚಿಗರೆಗಳನ್ನು ಹುಡುಕುತ್ತ ಅತ್ತ–ಇತ್ತ ಸುತ್ತಾಡ ಹತ್ತಿತು.

ಅಂದು ಅದೇ ಅಡವಿಗೆ ಕೆಲವು ಜನ ಬೇಟೆಗಾರರು ಬಂದಿದ್ದರು. ಅವರು ತಿರುಗಾಡುತ್ತ ಬರುವಾಗ ದೂರದಿಂದ ಆ ಮರಿಯನ್ನು ಕಂಡರು. ಇದನ್ನು ಹಿಡಿದು ಸರ್ಕಸ್ಸಿನವರಿಗಾಗಲಿ ಪ್ರಾಣಿ ಸಂಗ್ರಹಾಲಯದವರಿಗಾಗಲಿ ಕೊಟ್ಟರೆ ಸಾಕಷ್ಟು ದುಡ್ಡು ಬರುವದು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಲೆಕ್ಕ ಹಾಕಿ ಅವರೆಲ್ಲರೂ ಕಳ್ಳ ಹೆಜ್ಜೆಯಲ್ಲಿ ಬಂದು ಆ ಮರಿಯನ್ನು ಸುತ್ತುವರಿದು ಒಮ್ಮೆಲೇ ಕಂಬಳಿ ಚಲ್ಲಿ ಹಿಡಿದರು. ಆ ಬೇಟೆಗಾರರು ಕಂಬಳಿಯನ್ನು ಸುತ್ತಿ ಹಗ್ಗದಿಂದ ಬಿಗಿದರು. ಆ ಮರಿಯ ಬಾಯಲ್ಲಿ ಅರಿವೆಯ ಚಂಡನ್ನು ಮಾಡಿ ಹಾಕಿದರು. ಅದು ಒದ್ದಾಡ ಹತ್ತಿತು. ಆದರೆ ಗುರ್ ಎನ್ನಲು ಬಾರದಂತೆ ಆಗಿತ್ತು.

ಮುಂದೆ ಅವರು ಆ ಮರಿಯನ್ನು ಒಯ್ದು ಸರ್ಕಸ್ ಕಂಪನಿಗೆ ಮಾರಿದರು. ಅಲ್ಲಿ ಅದಕ್ಕೆ ಕಬ್ಬಿಣದ ಸಲಾಕೆಯ ಪೆಟ್ಟಿಗೆಯಲ್ಲೆ ವಾಸ ಮಾಡುವ ಪ್ರಸಂಗ ಬಂತು. ಆಗ ಅದಕ್ಕೆ ಬಹಳ ದುಃಖ ವಾಯಿತು. ಅದು ತನ್ನ ತಂದೆ–ತಾಯಿಗಳನ್ನು ನೆನಿಸ ಹತ್ತಿತು. ಗುರ್ರೆಂದು ತನ್ನ ಅಸಮಾಧಾನ ವ್ಯಕ್ತಪಡಿಸುತ್ತಿತ್ತು. ಏನು ಮಾಡಿದರೂ ಅದಕ್ಕೆ ಬಂಧನದಿಂದ ಮುಕ್ತವಾಗುವದು ಸಾಧ್ಯ ವಾಗಲಿಲ್ಲ. ಅದು ಮನದಲ್ಲಿ ನೊಂದು ಆಗಾಗ ಅಂದುಕೊಳ್ಳು ತ್ತಿತ್ತು.

ಹಿರಿಯರ ಮಾತು ಕೇಳದೇ ಇದ್ದುದರ ಪ್ರತಿಫಲ ಇದು ನಾನೀಗ ಅನುಭವಿಸುತ್ತಿದ್ದೇನೆ.

ಮಕ್ಕಳೇ: ಹಿರಿಯರ ಮಾತು ಮೀರಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

೧೧. ಉಪಕಾರಕ್ಕೆ ಪ್ರತಿ ಉಪಕಾರ

ಆನೆಗಳನ್ನು ಹಿಡಿಯಬೇಕಾದರೆ ಬೇಟೆಗಾರರು ಅವು ನೀರು ಕುಡಿಯಲು ಹೋಗುವ ದಾರಿಯಲ್ಲಿ ದೊಡ್ಡ–ದೊಡ್ಡ ತೆಗ್ಗು ಗಳನ್ನು ತೆಗೆದು ಆ ತೆಗ್ಗುಗಳು ಕಾಣದಂತೆ ಅದರ ಮೇಲೆ ಹುಲ್ಲು, ಕಸ–ಕಡ್ಡಿಗಳನ್ನು ಚೆಲ್ಲಿ ಮರೆ ಮಾಡುವರು. ಅದು ಗಟ್ಟಿ ನೆಲವೇ ಎಂದು ತಿಳಿದು ಓಡಿ ಬಂದ ಆನೆಗಳು ತೆಗ್ಗಿನಲ್ಲಿ ಬಿದ್ದು ಬಿಡುವವು. ಮುಂದೆ ಅವುಗಳನ್ನು ಸಾಕು ಆನೆಗಳ ಸಹಾಯದಿಂದ ಹಿಡಿದು ತರಲಾಗುವದು.

ಇಂಥ ಒಂದು ಖೆಡ್ಡಾದಲ್ಲಿ ಒಮ್ಮೆ ಒಂದು ಸಿಂಹವು ಬಿಗರೆಯ ಬೆಂಬಿತ್ತಿ ಓಡಿ ಹೋಗಿ ಬಿದ್ದು ಬಿಟ್ಟಿತು. ಅಲ್ಲಿಂದ ಹಾದು ಹೋಗುತ್ತಿದ್ದ ಬೇಟೆಗಾರನಿಗೆ ಆ 'ಖೆಡ್ಡಾ' ದಲ್ಲಿ ಬಿದ್ದು ಒದ್ದಾಡುವ ಸಿಂಹ ಕಂಡು ಬಂದಿತು. ಸಿಂಹ ಜಿಗಿಯಲು ಹೋಗಿ ಕಡಿದುಕೊಂಡು ಬೀಳುತ್ತಿತ್ತು.

ಇದನ್ನು ಬೇಟೆಗಾರನು ನೋಡಿದನು, ಅವನು ಬಹಳ ಎದೆ ಗಾರನಾಗಿದ್ದನು. ಆ ಸಿಂಹದ ಸಂಕಟ ಅವನಿಗೆ ನೋಡುವದಾಗ ಲಿಲ್ಲಾ. ಹೇಗಾದರೂ ಮಾಡಿ ಆ ಸಿಂಹವನ್ನು ಪಾರು ಮಾಡ ಬೇಕೆಂದು ಆತ ನಿಶ್ಚಯಿಸಿದ. ಆಲೋಚಿಸಿ ಒಂದು ಉಪಾಯ ಕಂಡು ಹಿಡಿದನು. ಆ ಖೆಡ್ಡಾದ ಸುತ್ತಲೂ ಚೂಪಾದ ತುದಿಯ ಹಲಗೆ ಹುಗಿಯಲಾಗಿತ್ತು. ಅದರಿಂದ ಸಿಂಹಕ್ಕೆ ದಾಟಲು ಬಾರ ದಂತೆ ಆಗಿತ್ತು. ಏಕೆಂದರೆ, ಅವು ಅದಕ್ಕೆ ಭಲ್ಲೆಯಂತೆ ಚುಚ್ಚು ತ್ತಿದ್ದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಟೆಗಾರನು ತನ್ನ ಹೆಗಲಿಗೆ ಹಾಕಿದ್ದ ಹಗ್ಗ ಬಿಚ್ಚಿ ಸುತ್ತಲೂ ಚುಚ್ಚಿದ ಎರಡು ಹಲಗೆಗಳಿಗೆ ಕಟ್ಟಿ ಸಮೀಪದ ಮರವನ್ನೇರಿದ. ತನ್ನ ಆತ್ಮ ಸಂರಕ್ಷಣೆಗಾಗಿ ಮರದ ಮೇಲೇರಿ ಕುಳಿತು ಅಲ್ಲಿಂದ ಹಗ್ಗ ಜಗ್ಗಿ ಆ ಹಲಗೆಗಳನ್ನು ಕಿತ್ತು ಹಾಕಿದ. ಇದರಿಂದ ಸಿಂಹಕ್ಕೆ ಮೇಲೆ ಬರಲು ದಾರಿ ಆಯಿತು. ಅದು ಟಣ್ಣನೇ ಜಿಗಿದು ಮೇಲೇರಿ ಬಂತು. ಅದಾದ ನಂತರ ಎಷ್ಟೋ ದಿವಸಗಳು ಗತಿಸಿದವು.ಬೇಟೆಗಾರ ಆಗಾಗ ಬೇಟೆಗಾಗಿಆ ಅರಣ್ಯಕ್ಕೆ ಹೋಗುತ್ತ ಇದ್ದ. ಒಂದು ದಿವಸ ಆತನು ನೀರಡಿಸಿ ಒಂದು ಹಳ್ಳಕ್ಕೆ ಬಂದು ನೀರು ಕುಡಿದು ತನ್ನ ಮಗ್ಗಲಿನಲ್ಲಿ ಬಂದೂಕು ಇಟ್ಟುಕೊಂಡು ಕುಳಿತಿದ್ದನು. ಬಹಳ ದಣಿವು ಆಗಿದ್ದರಿಂದ ಕುಳಿತಲ್ಲಿಯೇ ನಿದ್ರೆ ಆವರಿಸಿತು.

ಅಷ್ಟರಲ್ಲಿ ಒಂದು ಚಿರ್ಚವು ನೀರು ಕುಡಿಯಲು ಅಲ್ಲಿಗೆ ಬಂದಿತು. ಈತನನ್ನು ನೋಡಿ ಒಮ್ಮೆಲೇ ಮೇಲೇರಿ ಬಂತು. ಇನ್ನು ಮೇಲೇರಿ ಹೊಟ್ಟೆ ಹರಿದು ತಿನ್ನಬೇಕು ಎಂದು ನೋಡುವಲ್ಲಿ ಬೇಟೆಗಾರರಿಗೆ ಎಚ್ಚರವಾಯಿತು. ಎದುರಿಗಿದ್ದ ಚಿರ್ಚನ್ನು ನೋಡಿ ಭಯಭೀತನಾದ ಮಾತನಾಡಲು ನಾಲಿಗೆಯೇ ಏಳದಂತಾಯಿತು. ಇನ್ನು ಜೀವವೇ ಉಳಿಯಲಾರದು ಎಂದುಕೊಂಡನು.

ಆ ಕ್ಷಣವೇ ಸಿಂಹಘರ್ಜನೆಯೊಂದು ಕೇಳಿ ಬಂತು. ಆ ಆರ್ತನಾದವನ್ನು ಕೇಳಿದ ತಕ್ಷಣವೇ ಚಿರ್ಚವು ಅಲ್ಲಿಂದ ಕಾಲು ಕೀಳಲು ಅಣಿಯಾಯಿತು. ಆದರೆ, ಸಿಂಹವು ಒಂದೇ ನೆಗೆತಕ್ಕೆ ಚಿರ್ಚದ ಮೇಲೆ ಹಾರಿ ಅದರ ಹೊಟ್ಟೆ ಸೀಳಿ ಬಿಟ್ಟಿತು.

ಆದರೆ, ಬೇಟೆಗಾರನ ಭಯ ಇನ್ನೂ ಹೆಚ್ಚಾಯಿತು. ಇನ್ನು ಸಿಂಹ ನನ್ನನ್ನು ಬಿಡುವದಿಲ್ಲಾ ಎಂದು ತಿಳಿದನು. ಆದರೆ, ಹಾಗೆ ಆಗಲಿಲ್ಲ. ಪ್ರಾಣಿಯಾದರೂ ಸಿಂಹವು ಬೇಟೆಗಾರನಿಗೆ ಗುರ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಡಿದು ಅವನ ಹತ್ತಿರ ಬಂದು ಬಾಲ ಅಲ್ಲಾಡಿಸಿ ಹತ್ತಿರ ಬಂದು ಕುಳಿತಿತು. ಆಗ ಬೇಟೆಗಾರನಿಗೆ ಆ ಸಿಂಹದ ಗುರುತು ಸಿಕ್ಕಿತು. ಆತನು ಮೊದಲು ಖೆಡ್ಡಾದಿಂದ ಪಾರು ಮಾಡಿದ ಸಿಂಹವೇ ಅದೇ ಎಂದು ತಿಳಿದು ಸಂತೋಷ ಪಟ್ಟನು.

"ಪ್ರಾಣಿಗಳಲ್ಲಿ ಉಪಕಾರ ಬುದ್ಧಿ ಇದ್ದಷ್ಟು ಮನುಷ್ಯ ಪ್ರಾಣಿಯಲ್ಲಿ ಇಲ್ಲ."

●●

Sri Vidyabharathi Book Centre, Sringeri

CC-O. In Public Domain. Digitized by eGangotri

೧೨. ಪರೋಪಕಾರಿ ಬಾಲಕ

ಚಿತ್ರಾಪುರ ಎಂಬ ಹಳ್ಳಿಯೊಂದರ ಬೀದಿಯ ಮಗ್ಗುಲಲ್ಲಿ. ಒಬ್ಬ ಕುಂಟ ನಾವಿಕನೊಬ್ಬನು ಬಿದ್ದುಕೊಂಡಿದ್ದನು. ಬೇಸಿಗೆಯ ಬಿಸಿಲು ಬಹಳೇ ಆಗಿತ್ತು. ಕುಂಟನು ಮುಂದೆ ಹೋಗಬೇಕೆಂಬ ಆಸೆ ಇದ್ದರೂ ಆಗಲಿಲ್ಲ. ಏಕೆಂದರೆ, ಅವನ ಕೈಯ ಊರುಗೋಲು ಮುರಿದು ಹೋಗಿತ್ತು. ಹೀಗಾಗಿ ಅವನಿಗೆ ಮುಂದೆ ನಡೆಯಲು ಸಾಧ್ಯವಾಗಲಿಲ್ಲ. ಬಿದ್ದುಕೊಂಡೆ ಅವನು ಯೋಚಿಸತೊಡಗಿದ: ಯಾವುದಾದರೂ ಚಕ್ಕಡಿಯೊಂದು ಬಂದರೆ ಅವರಾದರೂ ನನ್ನನ್ನು ನನ್ನ ಊರಿಗೆ ತಲುಪಿಸಬಹುದು ! ಹೀಗೆ ಯೋಚನೆ ಮಾಡುತ್ತಿರಲು ಚಕ್ಕಡಿಯೊಂದು ಆ ದಾರಿಯಿಂದ ಬಂದೇ ಬಿಟ್ಟಿತು. ಅದನ್ನು ಕಂಡು ಆ ಕುಂಟ ನಾವಿಕನಿಗೆ ಬಹಳ ಸಂತೋಷವಾಯಿತು. ಅವನು ಚಕ್ಕಡಿಯವನಿಗೆ ತನ್ನ ಪರಿಸ್ಥಿತಿ ತಿಳಿಸಿ ತನಗೆ ಊರಿಗೆ ಮುಟ್ಟಿಸಲು ಪ್ರಾರ್ಥನೆ ಮಾಡಿಕೊಂಡನು. ಆದರೆ, ಆ ಚಕ್ಕಡಿಯವನು ಪುಕ್ಕಟೆ ಒಯ್ಯಲು ಒಪ್ಪಲಿಲ್ಲಾ. ಅದಕ್ಕಾಗಿ ಹಣ ಕೇಳಿದನು. ನಾವಿಕನ ಹತ್ತಿರ ಒಂದು ಬಿಡಿ ಕಾಸೂ ಇರಲಿಲ್ಲ. ಹೀಗಾಗಿ ಅತನಿಗೆ ಚಕ್ಕಡಿಯಲ್ಲಿ ಹೋಗದೇ ಅನಿವಾರ್ಯವಾಗಿ ಆದೇ ಸ್ಥಳದಲ್ಲಿ ಬಿದ್ದುಕೊಳ್ಳಬೇಕಾಯಿತು.

ಮುಂದೆ ಎಷ್ಟು ಹೊತ್ತು ಕಾದು ಕುಳಿತರೂ ಒಂದೂ ಚಕ್ಕಡಿ ಬರುವ ಸುಳಿವೆಯೇ ಕಾಣಲಿಲ್ಲ. ಬಿಸಿಲು ಏರುತ್ತಲೇ ಇತ್ತು. ಹಾಗೆ ಕುಂಡೆ ಹೊಸೆಯುತ್ತ ಅವನು ಒಂದು ಸಮೀಪದ ಗಿಡದ ಬುಡಕ್ಕೆ ಹೋದನು. ಆ ಗಿಡದ ನೆರಳು ಅವನಿಗೆ ಹಿತಕರವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆತನು ಗಾಢವಾದ ನಿದ್ರೆಗೆ ಒಳಗಾದ. ಮುಂದೆ ಕೆಲವು ಸಮಯದ ಮೇಲೆ ನಿದ್ದೆಯಿಂದ ಎಚ್ಚೆತ್ತು ನೋಡಲಾಗಿ ಅವನಿಗೆ ತನ್ನ ಕಣ್ಣನ್ನೆ ನಂಬದಂತೆ ಆಶ್ಚರ್ಯವಾಯಿತು. ಧಾರಾಕಾರವಾಗಿ ಮಳೆ ಸುರಿಯ ಹತ್ತಿದೆ. ಯಾವನೋ ಪುಣ್ಯಾತ್ಮನೊಬ್ಬನು ಆತನ ಮೈ ಮೇಲೆ ವಸ್ತ್ರವೊಂದನ್ನು ಹೊದಿಸಿದ್ದಾನೆ. ಅವನ ಪಕ್ಕದಲ್ಲಿಯೇ ಒಬ್ಬ ಬಾಲಕನು ಆತನ ಮುರಿದ ಊರುಗೋಲನ್ನು ರಿಪೇರಿ ಮಾಡುತ್ತಿರುವನು. ಇದೆಲ್ಲಾ ನೋಡಿ ಕುಂಟ ನಾವಿಕನಿಗೆ ಸಂತೋಷವಾಗಿ ಕೇಳಿದನು. ಏನಪ್ಪಾ, ನೀನು ಬರಿಮೈಯಿಂದ ನಿಂತು ನನ್ನ ಮೇಲೆ ಏಕೆ ಈ ವಸ್ತ್ರ ಹೊದಿಸಿದ್ದಿಯೇ ? ಆಗ ಬಾಲಕನು ನಾನು ಈಕಡೆಯಿಂದ ಹೊರಟಾಗ ನೀನು ಮಳೆಯಲ್ಲಿ ತೊಯ್ಯುತ್ತಿರುವದು ಕಂಡೆ. ಆಗ ನೀನು ಗಾಢ ನಿದ್ರೆಯಲ್ಲಿದ್ದೆ. ಮಳೆಯಿಂದ ತೊಯ್ದು ಹೋದರೆ ನಿನ್ನ ನಿದ್ದೆ ಕೆಡುವದು ಎಂದು ತಿಳಿದು ನನಗೆ ಹಾಗೆ ಮಾಡಬೇಕಾಯಿತು. ಮೇಲಾಗಿ ನೀನು ಮುದುಕನು. ತೋಯಿಸಿಕೊಂಡರೆ ಬೇನೆ ಬೀಳುವ ಸಂಭವ ಹೆಚ್ಚು. ನಾನು ಯುವಕನು ನನಗೆ ಏನೂ ಆಗಲಾರದು. ಅದಕ್ಕೆ ನನ್ನ ಅಂಗಿ ತೆಗೆದು ನಿನಗೆ ಹೊಚ್ಚಿದೆ. ಮೇಲಾಗಿ ನಿನ್ನ ಮುರಿದ ಕೋಲನ್ನು ನೋಡಿ ಅದನ್ನು ಹಗ್ಗದಿಂದ ಕಟ್ಟಿ ಗಟ್ಟಿಗೊಳಿಸುತ್ತಿದ್ದೇನೆ. ಇಲ್ಲಿಯೇ ಸಮೀಪದಲ್ಲಿ ನಮ್ಮ ಊರು ಅದೆ. ನೀನು ನನ್ನ ಜೊತೆಗೆ ಬಂದರೆ ನಾನು ನಿನಗೆ ನಮ್ಮ ಮಾವನನ್ನು ಭೆಟ್ಟಿ ಮಾಡಿಸುತ್ತೇನೆ. ಆತನಲ್ಲಿರುವ ಹೊಸ ಲಾಠಿಯನ್ನು ನಿನಗೆ ಕೊಡಿಸುತ್ತೇನೆ ಎಂದನು.

ಈ ಹುಡುಗನ ಮಾತು ಕೇಳಿ ಇವನ ಉಪಕಾರ ಬುದ್ಧಿ, ಮನಸ್ಸು ಕಂಡು ನಾವಿಕನಿಗೆ ಆಶ್ಚರ್ಯವೂ ಆನಂದವೂ ಆಯಿತು. ಹರುಷದಿಂದಾ ಆನಂದ ಭಾಷ್ಪಗಳು ತಮ್ಮಿಂದ ತಾವೇ ಸುರಿಯಲಾರಂಭಿಸಿದವು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಅದನ್ನು ಕಂಡು ಬಾಲಕ ಕೇಳಿದ: ಏಕಪ್ಪ ನೀನೇಕೆ ಅಳುತ್ತೀಯೇ ನಿನಗೆ ನನ್ನ ಜೊತೆ ಬರುವ ಇಷ್ಟ ಇಲ್ಲವೇ ಎಂದನು. ಅದಕ್ಕೆ ಕುಂಟನು ಅದಕ್ಕಾಗಿ ಅಲ್ಲ ಮಗೂ ನನ್ನ ಮಗನ ನೆನಪಾಯಿತು ! ಆತನೂ ನಿನ್ನ ಹಾಗೆ ಬಹಳ ಒಳ್ಳೆಯವನಾಗಿದ್ದ. ಅವನ ಧ್ವನಿ ಮಾತುಗಳು ಎಲ್ಲಾ ನಿನ್ನ ಹಾಗೆಯೇ ಸುಮಧುರವಾಗಿದ್ದಿತು. ಇಂದಿಗೆ ಐದು ವರ್ಷಗಳ ಹಿಂದೆ ನಾನು ಹಡಗಿನಲ್ಲಿ ನವಕರಿ ಮಾಡಲು ಹೋಗಿ ಈಗ ಮರಳುತ್ತಿರುವೆನು.ಆ ನನ್ನ ಮಗನು ಈಗ ಎಲ್ಲಿರುವನೋ ಹೇಗಿರುವನೋ ತಿಳಿಯದು. ಅವನ ನೆನಪಾಗಿಯೇ ಅಳುಬರುತ್ತದೆ ಎಂದನು. ಅದಕ್ಕೆ ಆ ಬಾಲಕನು ಕೇಳಿದ: ಆ ನಿನ್ನ ಮಗನ ಹೆಸರೇನು ತಾತಾ ? ಅದಕ್ಕೆ ನಾವಿಕನು ಹೇಳಿದ: ಆತನ ಹೆಸರು ರಾಮೂ ಮಗೂ, ಅಂದ ಹಾಗೆ ನಿನ್ನ ಹೆಸರೇನು ಎಂದನು. ನನ್ನ ಹೆಸರು ಶ್ಯಾಮೂ ಎಂದನು ಆ ಬಾಲಕ. ಇವರಿಬ್ಬರ ಮಾತು ಮುಗಿಯುವಷ್ಟರಲ್ಲಿ ಆ ಬಾಲಕನು ಆತನನ್ನು ಗಟ್ಟಿಯಾಗಿ ತಬ್ಬಿಕೊಂಡು, ಅಪ್ಪ ನಾನೇ ನಿನ್ನ ಆ ರಾಮೂ ! ಎಂದು ಅಂದನು. ಆ ಕುಂಟ ನಾವಿಕನಿಗೆ ಹುಡುಕುವ ಹೂ ಬಳ್ಳಿ ತಾನಾಗಿಯೇ ಕಾಲ್ತೊಡರಿದಂತಾಯಿತು.ಆತನ ಆನಂದಕ್ಕೆ ಪಾರವೇಉಳಿಯಲಿಲ್ಲ.

ಆ ಮೇಲೆ ಆ ಬಾಲಕ ತನ್ನ ತಂದೆಯನ್ನು ಊರಿಗೆ ಕರೆದು ಕೊಂಡು ಹೋಗಿ ತನ್ನ ಮಾವನಿಗೆ ಸಮಾಚಾರವನ್ನೆಲ್ಲ ಹೇಳಿದನು. ಆಗ ಮಾವನು ಬಹಳೇ ಸಂತೋಷವಾದನು. "ದೇವರ ದಯೆ ! ಆಕಸ್ಮಿಕವಾಗಿ ತಂದೆ–ಮಕ್ಕಳ ಮಿಲನವಾಯಿತು ಎಂದನು.

ಆ ಮೇಲೆ ಬಂಧು–ಬಳಗದವರೆಲ್ಲರೂ ಸೇರಿದರು. ಅಂದು ಮನೆಯಲ್ಲಿ ಹಬ್ಬವೇ ಆದಂತೆ ಆಯಿತು. ಈಗ ಕುಂಟ ನಾವಿಕನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಸ ಊರುಗೋಲು ದೊರೆತಿತು. ಇದನ್ನೆ ಜನರಿಗೆ ನಿರೂಪಿಸಿ ಅವರಿಗೆ ಸಂತೋಷ ಉಂಟು ಮಾಡುತ್ತಾನೆ.

ನೀತಿವಂತರೆ,

ಈ ಉಪಕಾರಿ ಬಾಲಕನಂತೆ ನೀವು ಬೇರೆಯವರಿಗೆ ಉಪಕಾರ ಮಾಡುವದನ್ನು ಕಲಿಯಿರಿ.

●●

CC-O. In Public Domain. Digitized by eGangotri

೧೩. ದಯೆಯೇ ಧರ್ಮದ ಮೂಲವು

ಚಂದ್ರಪುರ ಎಂಬ ಪ್ರಾಂತದಲ್ಲಿ ಒಬ್ಬ ಶ್ರೀಮಂತ ಜಮೀನ ದಾರ ಇದ್ದನು. ಆ ಜಮೀನುದಾರನಿಗೆ ವಿಜಯಕುಮಾರ ನೆಂಬಒಬ್ಬ ಮಗನಿದ್ದನು. ವಿಜಯಕುಮಾರನು ಬಹಳ ಪ್ರತಿ ಭಾಶಾಲಿ ಒಳ್ಳೆಯ ಮನಸ್ಸಿನವನು ಆಗಿದ್ದು ದಯವೇ ಆತನ ಧರ್ಮವಾಗಿತು.

ಒಂದು ವರುಷ ದೈವಶಾತ ಮಳೆಯೇ ಆಗಲಿಲ್ಲ. ಬೆಳೆಗಳೆಲ್ಲಾ ಒಣಗಿ, ರೈತರ ಕೈಗೆ ಒಂದು ಕಾಳೂ ಬರಲಿಲ್ಲ. ಹೀಗಾಗಿ ಜಮೀನ ದಾರನಿಗೆ ಕಂದಾಯ ಸಲ್ಲಿಸುವದು ಸಾಧ್ಯವಾಗಲಿಲ್ಲ.

ಜಮೀನುದಾರರ ಮಗ ವಿಜಯಕುಮಾರ ಅವರ ಮಾತು ಗಳನ್ನು ಕೇಳಿ ಕನಿಕರಗೊಂಡು ಕಣ್ಣಲ್ಲಿ ನೀರು ತಾನಾಗಿಯೇ ಉಕ್ಕಿ ಬಂದವು. ವಿಜಯನು ಮನದಲ್ಲಿಯೇ, ಈ ದೀನರ ಸಂಕಟ ಗಳನ್ನು ದೂರ ಮಾಡಲೇ ಬೇಕು ಎಂದು ನಿರ್ಧರಿಸಿದನು. ವಿಜಯ ಕುಮಾರನು ಕುದುರೆ ಸವಾರಿ ಕಲಿಯುವದರಲ್ಲಿ ಮಗ್ನನಾಗಿದ್ದಾಗ ತಂದೆ ಮಗನನ್ನು ಕುರಿತು: ಕುದುರೆ ಸವಾರಿ ಮಾಡುವದನ್ನು ಚೆನ್ನಾಗಿ ಕಲಿತುಕೊಂಡರೆ ನಿನಗೆ ಉತ್ತಮ ಬಹುಮಾನ ಕೊಡು ತ್ತೇನೆ ಎಂದನು. ಆದರೆ, ವಿಜಯಕುಮಾರನು ಅಷ್ಟರಲ್ಲೆ ಕುದುರೆ ಸವಾರಿಯಲ್ಲಿ ಒಳ್ಳೆ ಪ್ರವೀಣನಾಗಿದ್ದನು. ತನ್ನ ವಿದ್ಯೆ ಯನ್ನು ಆ ದಿವಸ ಆಗಲೇ ತಂದೆಯ ಮುಂದೆ ಪ್ರದರ್ಶಿಸಿಯೂ ಆಯಿತು. ತಂದೆ ಕೇಳಿದ: ಮಗು ! ವಿಜಯಾ ನನಗಿಂದು ಅತೀ ಆನಂದವಾಗಿದೆ. ಹೇಳು ನಿನಗೆ ಏನು ಬಹುಮಾನ ಬೇಕು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದನು. ಆಗ ವಿಜಯನು: ಅಪ್ಪಾಜೀ ನಮ್ಮ ಪ್ರಾಂತದ ಈ ಬಡ ರೈತರ ಜಪ್ತಾಗಿರುವ ಸಾಮಾನುಗಳನ್ನೆಲ್ಲಾ ಪರತ ಕೊಡುವ ಕೃಪೆ ಆಗಬೇಕು. ಅದೇ ನೀವು ನನಗೆ ಕೊಡುವ ಅತೀ ದೊಡ್ಡ ಬಹುಮಾನ ಎಂದನು. ಮಗನ ಈ ದಯಾಳು ಗುಣವನ್ನು ಕಂಡು ಜಮೀನುದಾರನಿಗೆ ಹಿಡಿಸಲಾರದಷ್ಟು ಹಿಗ್ಗಾಯಿತು. ಆತನ ಕಣ್ಣಿನಿಂದ ಆನಂದ ಭಾಷ್ಪಗಳು ಹರಿದವು. ಆತನು ಮತ್ತೆ ಕೇಳಿದ: ನೋಡು ಮಗೂ ನೀನು ನಿನಗಾಗಿ ಏನನ್ನೂ ಕೇಳಲಿಲ್ಲ. ಏನಾದರೂ ಕೇಳು ಮಗೂ ! ಆದಕ್ಕೆ ಮಗನು ಅಪ್ಪಾಜೀ ! ತಮಗೆ ಸಂತೋಷವಾಗುವದಾದರೆ, ಇನ್ನು ಮೇಲೆ ಯಾವದೇ ವರುಷ ಬೆಳೆಬಾರದೇ ಇದ್ದಲ್ಲಿ, ಕಂದಾಯ ಎತ್ತುವದನ್ನೇ ನಿಲ್ಲಿಸಬೇಕು. ಹಾಗೆ ಅಂತಾ ನನಗೆ ವಚನ ಕೊಡಿರಿ ಆಗ್ಗೆ ನನ್ನ ಆತ್ಮಕ್ಕೆ ಶಾಂತಿ ಎಂದನು.

ಮಗನ ಈ ವಿಶಾಲ ಗುಣವನ್ನು ಕಂಡು ಜಮೀನದಾರನ ಆನಂದಕ್ಕೆ ಮಿತಿಯೇ ಉಳಿಯಲಿಲ್ಲಾ. ಆತನು ಮಗನ ಇಚ್ಛೆಯಂತೆಯೇ ಮಾಡಿದನು. ಜಪ್ತಾದ ವಸ್ತುಗಳನ್ನು ಮರಳಿ ಕೊಡಿಸಿದನು. ಬೆಳೆ ಬಾರದಿದ್ದಾಗ ಕಂದಾಯ ಎತ್ತ ಬಾರದೆಂಬ ನಿರ್ಧಾರ ಮಾಡಿದನು. ರೈತರೆಲ್ಲರೂ ಅತ್ಯಂತ ಸಂತುಷ್ಟರಾಗಿ ಜಮೀನುದಾರರಿಗೂ ಅವರ ಮಗನಿಗೂ ಹಾಡಿ ಹರಸಿದರು.

ದಯೆಯಲ್ಲಿಯೇ ಧರ್ಮ ಉಂಟು ದಯೇ ಇರಬೇಕು ಸಕಲ ಪ್ರಾಣಿಗಳಲ್ಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೪. ದೇವರಿಲ್ಲದ ಸ್ಥಳವಿಲ್ಲ

ಮಾತಗಿ ಎಂಬ ಹಳ್ಳಿಯಲ್ಲಿ ಒಬ್ಬ ಒಕ್ಕಲಿಗನಿದ್ದನು. ಅವನು ಒಕ್ಕಲುತನದಲ್ಲಿ ಬಹಳೇ ಪಳಗಿದವನಾಗಿದ್ದನು. ಅವನಿಗೆ ಒಬ್ಬನೇ ಒಬ್ಬ ಮಗನಿದ್ದನು. ಅವನು ಸಹ ಒಳ್ಳೇ ಚುರುಕು ಸ್ವಭಾವದವನು ದಯಾ ಗುಣವುಳ್ಳವನು ಆಗಿದ್ದನು. ಆದರೂ ತಂದೆಗೂ–ಮಗನಿಗೂ ಸ್ವಲ್ಪ ವ್ಯತ್ಯಾಸ ಕಂಡು ಬರುತ್ತಿತ್ತು. ತಂದೆಯು ಪ್ರತಿದಿನವೂ ಮಗನಿಗೆ ಉತ್ತಮ ಕಥೆಗಳನ್ನು ಹೇಳುತ್ತಿದ್ದನು. ಮಾತಿಗೆ ಮಾತು ಕೂಡಿದಾಗ ತಂದೆಯು ಮ.ಗನನ್ನು ಕುರಿತು ಮಗನೇ ರವೀಂದ್ರ ಎಂಥಾ ಪ್ರಸಂಗದಲ್ಲಿಯೂ ಕೂಡ ದೇವರಿಗೆ ಮರೆಯಬಾರದು. ಅವನು ಎಲ್ಲಾ ಕಡೆಯಲ್ಲಿ ತುಂಬಿಕೊಂಡಿರುವನು. ಅವನಿಲ್ಲದ ಸ್ಥಳವೇ ಇಲ್ಲ ಎಂಬುದು ಮರೆಯಬೇಡ ಎಂದನು. ಬಾಲಕನು ಸುತ್ತುಕಡೆ ದೃಷ್ಟಿ ಹೊರಳಿಸುತ್ತ ಕೇಳಿದನು ಅಪ್ಪಾ ಎಲ್ಲಾಕಡೆಗೂ ದೇವರು ಇರುವನೇ ಆದರೆ, ನನಗೆ ಆತನು ಎಲ್ಲಿಯೂ ಕಾಣುವದಿಲ್ಲವಲ್ಲಾ ಎಂದನು.

ಅದಕ್ಕೆ ತಂದೆಯು: ಮಗನೇ ದೇವರು ನಮಗೆ ಕಾಣದೇ ಹೋದರೂ ಅವನು ಸರ್ವತ್ರವ್ಯಾಪಿಯು. ನಾವು ಮಾಡುತ್ತಿರುವ ಎಲ್ಲಾ ಕೆಲಸಗಳನ್ನು ಅವನು ನೋಡುತ್ತಿರುತ್ತಾನೆ ಎಂದನು. ತಂದೆಯ ಈ ಮಾತನ್ನು ರವೀಂದ್ರನು ನೆನಪಿನಲ್ಲಿಟ್ಟುಕೊಂಡನು.

ಕೆಲವು ದಿವಸಗಳು ಕಳೆದವು. ಒಮ್ಮೆ ಮಾತಂಗಿ ಹಳ್ಳಿಗೆ ಮಳೆ ಬಾರದೆ ಬರಗಾಲ ಬಿದ್ದಿತು. ಅವರ ಹೊಲದಲ್ಲಿ ಬೆಳೆಯೇ ಬರಲಿಲ್ಲ. ಒಂದು ದಿವಸ ರಾತ್ರಿ ತಂದೆಯು ಮಗನನ್ನು ಕರೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಊರ ಹೊರಗೆ ಹೊರಟನು. ತನ್ನ ಹೊಲ ಬಿಟ್ಟು ಬೇರೆಯವರ ಹೊಲದಲ್ಲಿ ಜೋಳದ ತೆನೆಗಳನ್ನು ಕೊಯ್ದು ತರುವ ಉದ್ದೇಶದಿಂದ ಒಕ್ಕಲಿಗ ಹೊರ ಬಿದ್ದಿದ್ದನು. ಕತ್ತಲೆಯಲ್ಲಿ ಆತನು ಒಂದು ಒಳ್ಳೆಯ ಬೆಳೆ ಬಂದ ಹೊಲಕ್ಕೆ ಹೋಗಿ ನಿಂತನು. ಆಗ ತನ್ನ ಮಗನಿಗೆ ಕುರಿತು: ನೋಡು ರವಿ ನೀನು ಇಲ್ಲಿಯೇ ಈ ಬದುವಿನ ಮೇಲೆ ನಿಂತು ಯಾರಾದರೂ ಬರುವರೆನೋ ನೋಡತಾ ಇರು ಎಂದನು.

ಹೀಗೆ ಹೇಳಿ ತಂದೆಯು ಜೋಳದ ತೆನೆ ಕೊಯ್ಯಲು ಪ್ರಾರಂಭ ಮಾಡಿದನು. ಅಷ್ಟರಲ್ಲಿ ಬಾಲಕನು ಕೂಗಿಕೊಂಡನು. ಅಪ್ಪಾ ತಡೆ–ತಡೆ ಎನ್ನಲು ತಂದೆಯು ಏಕೆ ಮಗು ಏನಾಯಿತು ? ಯಾರಾದರೂ ಬಂದರೆ ? ಎನ್ನಲು ಯಾರೂ ಬಂದಿಲ್ಲಾ ಎಂದನು ಬಾಲಕ.

ಹಾಗಾದರೆ ? ಯಾರಾದರೂ ನೋಡುತ್ತಿರುವರೋ ಎಂದನು, ಅದಕ್ಕೆ ಬಾಲಕನು ಅಹುದಪ್ಪಾ ನೋಡುತ್ತಿದ್ದಾರೆ ಎಂದನು. ತಂದೆಯು ಕೂಡಲೇ ತೆನೆ ಕೊಯ್ಯುವದು ಬಿಟ್ಟು ಬದುವಿನ ಮೇಲೆ ಬಂದು ನಾಲ್ಕೂ ಕಡೆಗೆ ದಿಟ್ಟಿಸಿ ನೋಡಿದನು. ಯಾರೂ ಕಾಣಲಿಲ್ಲದ್ದು ನೋಡಿ ಏನಪ್ಪಾ ಮಗನೇ ಯಾರು ನೋಡುತ್ತಿದ್ದಾರೆ ? ಎಂದನು.

ಆಗ ಮಗನು ತಂದೆಯನ್ನು ಕುರಿತು: ಅಪ್ಪಾ ಈ ಹಿಂದೆ ನೀನೆ ಹೇಳಿರಲಿಲ್ಲವೇ ದೇವರಿಲ್ಲದ ಸ್ಥಳವಿಲ್ಲ. ಅವನು ಎಲ್ಲೆಲ್ಲಿಯೂ ಇರುತ್ತಾನೆ. ನಾವು ಮಾಡುತ್ತಿರುವ ಎಲ್ಲಾ ಕೆಲಸಗಳನ್ನು ನೋಡುತ್ತಿರುತ್ತಾನೆ. ಯಾರಿಗೂ ಹೆದರದಿದ್ದರೂ ದೇವರಿಗೆ ಹೆದರಬೇಕು ಎಂದು. ಅಂದ ಮೇಲೆ ನೀನು ಕೊಯ್ಯು

Sri Vidyabharathi Book Centre, Sirsi

 CC-O. In Public Domain. Digitized by eGangotri

ತ್ತಿರುವ ಬೇರೆಯವರ ಬೆಳೆ ದೇವರು ನೋಡುವದಿಲ್ಲವೇನಪ್ಪಾ ? ಎಂದನು.

ಮಗನ ಈ ಮಾತುಗಳನ್ನು ಕೇಳಿ ತಂದೆಗೆ ಬಹಳ ನಾಚಿಕೆಯಾಯಿತು. ಆತನು ಕಳುವಿನ ವಿಚಾರ ಬಿಟ್ಟು ಮಗನನ್ನು ಕರೆದು ಕೊಂಡು ಮನೆಗೆ ತೆರಳಿದನು.

ನೆನಪಿರಲಿ:

ದೇವರಿಲ್ಲದ ಸ್ಥಳವೇ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೫. ಒಕ್ಕಟ್ಟಿರುವಲ್ಲಿಯೇ ಬಲವಿದೆ

ಒಂದು ಊರಲ್ಲಿ ರಾಮಣ್ಣ ಎಂಬ ದೊಡ್ಡ ರೈತನಿದ್ದನು. ಆತನಿಗೆ ದೇವರು ಯಾವುದಕ್ಕೂ ಕೊರತೆ ಮಾಡಿರಲಿಲ್ಲ. ಸಾಕಷ್ಟು ಭೂಮಿ–ಸೀಮೆ ಜೊತೆಗೆ ಮೆಚ್ಚಿನ ಮಡದಿ ಇದ್ದಳು. ಪಂಚ ಪಾಂಡವರಂತೆ ಬಲಶಾಲಿಯಾದ 5 ಜನ ಮಕ್ಕಳು ಇದ್ದರು. ಆದರೆ, ಆ ಪಾಂಡು ಕುಮಾರರಿಗೂ ಈ ರಾಮಣ್ಣನ ಮಕ್ಕಳಿಗೂ ಬಹಳೇ ಅಂತರವಿತ್ತು. ರಾಮಣ್ಣನ ಮಕ್ಕಳದು ಒಬ್ಬೊಬ್ಬರದು ಒಂದು ದಾರಿ. ತಮ್ಮ-ತಮ್ಮೊಳಗೇ ಹೊಂದಿಕೆಯೇ ಇರುತ್ತಿರಲಿಲ್ಲಾ. ಒಬ್ಬನು ಇನ್ನೊಬ್ಬನಿಗೆ, ಇನ್ನೊಬ್ಬನು ಮತ್ತೊಬ್ಬನಿಗೆ ಹೀಗೆ ಒಬ್ಬರಿಗೊಬ್ಬರು ಸೇರುತ್ತಿರಲಿಲ್ಲ. ಆಂತರಿಕ ಕಲಹವೇ ಅವರ ಜೀವನದ ಗುರಿಯಾಗಿತ್ತು.

ಮಕ್ಕಳ ಈ ರೀತಿಯ ವರ್ತನೆ ನೋಡಿ–ನೋಡಿ ರಾಮಣ್ಣನಿಗೆ ಒಂದು ದೊಡ್ಡ ತಲೆ ಶೂಲೆಯೇ ಆಗಿತ್ತು. ಈಗಲೇ ಹೀಗಾದರೆ, ಇನ್ನು ಮುಂದೆ ಸೊಸೆಯಂದಿರು ಬಂದರೆ ಹೇಗೆ ಎಂಬ ಚಿಂತೆ ಅವನನ್ನು ಕಾಡ ಹತ್ತಿತು. ಇವರನ್ನು ಹೇಗಾದರೂ ಮಾಡಿ ದಾರಿಗೆ ತರಲೇಬೇಕು ಎಂದು ಆಲೋಚಿಸುತ್ತಿದ್ದನು.

ಹೀಗೆ ಆಲೋಚಿಸುವಾಗ ಅವನಿಗೊಂದು ಉಪಾಯ ಹೊಳೆಯಿತು. ಐದು ಒಣದಾದ ಬಡಕಲು ಕಟ್ಟಿಗೆಗಳನ್ನು ತರಿಸಿ ಅವುಗಳನ್ನು ಒಂದು ಹೊರೆಯಾಗುವಂತೆ ಕಟ್ಟಿ ತನ್ನ ಹತ್ತಿರ ಇರಿಸಿಕೊಂಡನು. ಆಮೇಲೆ ತನ್ನ ಐದೂ ಮಕ್ಕಳನ್ನೂ ಕರೆದು ಹೇಳಿದನು.

ಮಕ್ಕಳೇ, ಇಲ್ಲಿರುವ ಕಟ್ಟಿಗೆಯ ಕಟ್ಟನ್ನು ಎತ್ತಿ ಯಾರು ಮುರಿಯುವರೋ ಅವರಿಗೆ ನಾನೊಂದು 25 ರೂಪಾಯಿ ಬಹುಮಾನ

Sri Vidyabharati Book Centre, Shringeri

CC-O. In Public Domain. Digitized by eGangotri

ವಾಗಿ ಕೊಡುತ್ತೇನೆ ಅಂಥ ವೀರರು ಯಾರಾದರೂ ಇದ್ದೀರೋ ನನಗಿಂದು ನೋಡಬೇಕು ಎಂದನು. ತಂದೆಯ ಮಾತು ಕೇಳಿದ ತಕ್ಷಣ ಪ್ರತಿಯೊಬ್ಬನೂ ಬಹುಮಾನದ ಆಶೆಗಾಗಿ ನಾ ಮುಂದೆ ನೀ ಮುಂದೆ ಎಂದು ಜಗಳವಾಡಹತ್ತಿದರು. ಆಗ ತಂದೆ ರಾಮಣ್ಣನು: ಮೊದಲು ಚಿಕ್ಕವನೇ ಈ ಹೊರೆಯನ್ನು ಮುರಿಯಲಿ ಎಂದನು. ಇದನ್ನು ಕೇಳಿ ಕಿರಿಯ ಮಗನಿಗೆ ಸಂತೋಷವಾಯಿತು. ಅವನು ತಕ್ಷಣ ಆ ಕಟ್ಟಿಗೆಯ ಹೊರೆಯನ್ನು ಎತ್ತಿ ತನ್ನ ಮೈಯಲ್ಲಿಯ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಮುರಿಯಲು ಮುಂದಾದನು. ಮೈಯಲ್ಲಾ ಬೆವರು ಆಯಿತು. ಮುಖ ಕೆಂಪಾಯಿತು. ಆದರೆ, ಕಟ್ಟಿಗೆ ಹೊರೆ ಅವನಿಗೆ ಬಗ್ಗಲಿಲ್ಲ. ಆತನು ಸೋಲನ್ನಪ್ಪಿ ಹಿರಿಯವನಿಗೆ ಕೊಟ್ಟನು. ಆ ಮೇಲೆ ಹಿರಿಯನೂ ಆ ಹೊರೆಯನ್ನು ಮುರಿಯುಲು ಶತಪ್ರಯತ್ನ ಮಾಡಿ-ಮಾಡಿ ಬೇಸತ್ತನು. ಅದೇ ರೀತಿಯಾಗಿ ಉಳಿದವರೂ ಪ್ರಯತ್ನಿಸಿ ಸೋಲನ್ನಪ್ಪಿ ಜೋಲು ಮುಖ ಮಾಡಿಕೊಂಡು ಸುಮ್ಮನೆ ನಿಂತರು.

ಆಗ ಮಕ್ಕಳ ಮುಖ ನೋಡಿ ರಾಮಣ್ಣನು ಕಟ್ಟಿಗೆಯ ಕಟ್ಟನ್ನು ಬಿಚ್ಚಿ ಒಂದೊಂದು ಕಟ್ಟಿಗೆಯನ್ನು ಒಬ್ಬೊಬ್ಬರಿಗೆ ಕೊಟ್ಟನು. ಅದನ್ನು ಅವರಿಗೆ ಮುರಿಯಲು ಹೇಳಿದನು. ಆಗ ಪ್ರತಿಯೊಬ್ಬರೂ ಪಟ ಪಟನೇ ಮುರಿದು ಹಾಕಿದರು.

ಆಗ ರಾಮಣ್ಣನು ಮಕ್ಕಳಿಗೆ ಕುರಿತು: ಮಕ್ಕಳೇ ಈ ಕಟ್ಟಿಗೆಗಳು ಒಂದಾಗಿ ಕೂಡಿ ಹೊರೆ ಕಟ್ಟಿ ಇರುವಾಗ ನಿಮ್ಮಲ್ಲಿ ಯಾರಿಗೂ ಇದನ್ನು ಮುರಿಯುವದು ಆಗಲಿಲ್ಲ. ಆದರೆ, ಅವುಗಳನ್ನು ಬೇರೆ-ಬೇರೆ ಮಾಡಿ ನಿಮಗೆ ಕೊಟ್ಟರೆ ನೀವು ಬಹಳ ಸುಲಭವಾಗಿ ಅವುಗಳನ್ನು ಮುರಿದು ಹಾಕಿದಿರಿ. ಇದೇ ಪ್ರಕಾರ ನೀವು ಐದೂ ಜನ ಅಣ್ಣ-ತಮ್ಮಂದಿರು ನಿಮ್ಮ ನಿಮ್ಮಲ್ಲಿ ಜಗಳಾಡಿ ಬೇರೆ

Sri Vidyabharathi Book Centre, Sirsi

CC-O. In Public Domain. Digitize

ಯಾದಲ್ಲಿ ನಿಮಗೆ ಆಗದವರು ನಿಮ್ಮನ್ನ
ಅವನತಿಗೆ ಕಾರಣರಾಗುವರು. ಆದರೆ,
ಹೊಂದಿಕೊಂಡು ಇದ್ದರೆ ನಿಮ್ಮ ಸುದ್ದಿಗೆ ಯಾರೂ
ಅಷ್ಟೇ ಅಲ್ಲ ನಿಮ್ಮನ್ನು ಕೆಣಕುವ ಸಾಹಸ ಎಂಥ ವೈರಿಗೂ
ಆಗುವದಿಲ್ಲ. ತಂದೆಯ ಈ ಮಾತುಗಳನ್ನು ಕೇಳಿ ಮಕ್ಕಳೆಲ್ಲರಿಗೂ
ಮನವರಿಕೆಯಾಯಿತು. ಅಂದಿನಿಂದ ಅವರೆಲ್ಲರೂ ಪರಸ್ಪರ ಜಗಳ
ಾಡುವದನ್ನು ನಿಲ್ಲಿಸಿ ಎಲ್ಲರೂ ಒಂದಾಗಿ ಬಾಳಿ ಬದುಕಲು ಸಿದ್ಧ
ರಾದರು. ಒಕ್ಕಟ್ಟಿರುವಲ್ಲಿ ಬಲವಿದೆ ಎಂದರು.

ನೆನಪಿರಲಿ
ಒಕ್ಕಟ್ಟಿರುವಲ್ಲಿ ಬಲವಿರುತ್ತದೆ.

CC-O. In Public Domain. Digitized by eGangotri

ವಾಗಿ ಕೊಡುತ್ತೇನೆ '
ನನಗಿಂದು ನೋಡಬ
ತಕ್ಷಣ ಪ್ರತಿಯೆ

ವಂಚನೆಗೆ ತಕ್ಕ ಫಲ

ಮುಂದೆಂದು ಕಾಡಿನಲ್ಲಿ ನರಿಯೊಂದಕ್ಕೆ ಬಹಳ ಹಸಿವೆಯಾಗಿದ್ದಿತು. ಕಾಡಿನಲ್ಲಿ ಎಲ್ಲಿ ಹುಡುಕಿದರೂ ತಿನ್ನಲು ಅದಕ್ಕೆ ಏನೂ ಸಿಗಲಿಲ್ಲ. ಕೊನೆಗೆ ಅದು ಅನ್ನವನ್ನು ಹುಡುಕುತ್ತ ಕೊನೆಗೆ ಒಂದು ಗ್ರಾಮಕ್ಕೆ ಬಂದಿತು. ಆ ಗ್ರಾಮಕ್ಕೆ ಬಂದಾಗ ಸುತ್ತಮುತ್ತಲೂ ಕತ್ತಲು ಕವಿದಿತ್ತು. ಜನರೆಲ್ಲರೂ ನಿದ್ರೆ ಹೋಗಿದ್ದರು. ಅದರಲ್ಲಿಯೂ ಚಳಿಗಾಲ ಜನರು ಕಿಡಕಿ ಬಾಗಿಲು ಎಲ್ಲಾ ಭದ್ರವಾಗಿ ಮುಚ್ಚಿ ಕೊಂಡು ಪೂರ್ತಿ ನಿದ್ರೆ ಹೊಡೆಯುತ್ತಿದ್ದರು.

ನರಿಯು ಬೀದಿ–ಬೀದಿ ಸುತ್ತುತ್ತ ಕೊನೆಗೆ ಒಂದು ಅಗಸನ ಮನೆಯ ಹತ್ತಿರ ಬಂತು. ಅಲ್ಲಿ ಅವನು 4-5 ಕತ್ತೆ ಕಟ್ಟಿದ್ದನು. ಅವುಗಳ ಮಗ್ಗುಲಿಗೆ ಒಂದು ಹೌದಿನಲ್ಲಿ ನೀರು ತುಂಬಿ ಇಟ್ಟಿದ್ದರು. ಇನ್ನೊಂದರಲ್ಲಿ ಅರಿವೆ ತೋಯಿಸಿ ಇಟ್ಟಿದ್ದರು. ನರಿಗೆ ಯಾವುದೋ ಒಂದು ಸುವಾಸನೆಯೇ ಬಂದಂತೆ ಭಾಸವಾಯಿತು. ನರಿಯು ಹಿಗ್ಗಿ ಹೆಬ್ಬಾಗಿಲಾಯಿತು. ಆದರೆ, ಆ ಹೌದು ಎತ್ತರವಾಗಿತ್ತು. ಏನು ಮಾಡಬೇಕು ಎಂದು ಯೋಚಿಸಿ ಟಣ್ಣನೇ ಅದರಲ್ಲಿ ಜಿಗಿಯಿತು. ಪರಿಣಾಮವಾಗಿ ಅದರಲ್ಲಿ ಬಿದ್ದು ಬಿಟ್ಟಿತು.

ಚಳಿಗಾಲದಲ್ಲಿ ಅದರಲ್ಲೂ ರಾತ್ರಿ ತಣ್ಣೀರಲ್ಲಿ ಜಿಗಿದು ಬಿಟ್ಟಿತು. ನರಿಯು ದುರವಸ್ಥೆಗೆ ಈಡಾಯಿತು. ತನ್ನ ಶಕ್ತಿಯೆಲ್ಲ ವನ್ನೂ ಉಪಯೋಗಿಸಿ, ಅಲ್ಲಿಂದ ಕೆಳಕ್ಕೆ ಹಾರಿ, ಕಾಲಿಗೆ ಬುದ್ಧಿ ಹೇಳಿತು. ಸೀದಾ ಅಡವಿಯ ದಾರಿ ಹಿಡಿಯಿತು. ಬೆಚ್ಚಗಿರುವ ಒಂದು ಗಿಡದ ಬುಡಕ್ಕೆ ಆಶ್ರಯಿಸಿ ಬಿದ್ದು ಕೊಂಡಿತು. ನಡುಕು ಹರಿಯುವ

© Sri Vidyabharathi Book Centre, Sringeri

CC-O. In Public Domain. Digitized

ಹೊತ್ತಿಗೆ ಸ್ವಲ್ಪ ನೀರನ್ನಾದರೂ ಕು
ಹೋಯಿತು. ನೀರಲ್ಲಿ ತನ್ನ ಪ್ರತಿಬಿಂಬ
ಅದು ಬೆರಗಾಯಿತು. ತನ್ನ ಸ್ವರೂಪದ ಪರಿ
ರಾತ್ರಿಯಲ್ಲಿ ನೀಲಿಬಣ್ಣ ತುಂಬಿದ ಹೌದಿನಲ್ಲಿ ತಾನು
ಪರಿಣಾಮವಾಗಿ ಅದು ನೀಲಿವರ್ಣವಾಗಿದ್ದಿತು. ಇದರಿಂದ ನರಿಗೆ
ಬಹಳೇ ಸಂತೋಷವಾಯಿತು.

ನರಿಯ ಜಾತಿ ಮೊದಲೇ ಬಹಳ ತಕ್ಕು. ಇಂಥದರಲ್ಲಿ ಅದಕ್ಕೆ ಹೊಸ ರೂಪ ಬೇರೆ ಲಭಿಸಿತು. ಇದರ ಉಪಯೋಗ ತಕ್ಕೊಳ್ಳ ಬೇಕೆಂದು ಆಲೋಚಿಸಿತು. ತಕ್ಷಣವೇ ಅದು ಕಾಡು ಪ್ರಾಣಿಗಳ ಎಲ್ಲದರ ಮಹಾಸಭೆ ಕರೆಯಿತು.

ನಾನು ನೀಲಮಣಿ ಈ ವನಕ್ಕೆ ಮಹಾರಾಜನನ್ನಾಗಿ ನನ್ನನ್ನು ಬ್ರಹ್ಮದೇವನೇ ಇಲ್ಲಿಗೆ ಕಳಿಸಿರುತ್ತಾನೆ. ಎಲ್ಲರೂ ನನ್ನ ಪ್ರಭುತ್ವ ವನ್ನು ಮಾನ್ಯ ಮಾಡಲೇಬೇಕು ಇಲ್ಲವಾದರೆ ಘೋರ ಶಿಕ್ಷೆಗೆ ಗುರಿ ಯಾಗಬೇಕಾಗುತ್ತದೆ ಎಚ್ಚರ ಎಂದಿತು.

ಈ ವರೆಗೂ ಅಂಥ ಅದ್ಭುತ ವರ್ಣದ ಪ್ರಾಣಿಯನ್ನು ಯಾರೂ ನೋಡಿರಲಿಲ್ಲವಾದ್ದರಿಂದ, ಎಲ್ಲ ಪ್ರಾಣಿಗಳು ಹೆದರಿ ನರಿ ಮಹಾರಾಜನ ಪ್ರಭುತ್ವವನ್ನು ಒಪ್ಪಿಕೊಂಡವು. ಇದರಿಂದ ನರಿಯ ರಾಜಠೀವಿಗೆ ಮೀತಿಯೇ ಉಳಿಯಲಿಲ್ಲ. ಅದು ಸಿಂಹವನ್ನು ತನ್ನ ಪ್ರಧಾನಿಯಾಗಿಯೂ, ಚಿರ್ಚವನ್ನು ಸೇನಾಧಿ ಪತಿಯನ್ನಾಗಿಯೂ ಇತರರಿಗೆ ಬೇರೆ–ಬೇರೆ ನೌಕರರನ್ನಾಗಿಯೂ ಮಾಡಿಕೊಂಡು ರಾಜ್ಯ ಕಾರಭಾರ ನಡೆಯಿಸಿತು. ರಾಜಠೀವಿಗೆ ತಕ್ಕಂತೆ ನರಿಯು ಕುಳಿತ ಲ್ಲಿಯೇ ಎಲ್ಲರಿಗೂ ಆಜ್ಞೆ ಮಾಡಹತ್ತಿತು. ಆಜ್ಞೆಯ ಪ್ರಕಾರ ಸಿಂಹವು ಬೇಟೆಯಾಡಿ ಕೊಂಡು ಬರುತ್ತಿತ್ತು. ಕರಡಿ ತರ–ತರದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಕೊಡುತ್ತೇನೆಂದಹತ್ತಿದವು. ನರಿ ಮಾತ್ರ ಏನೂ ಮಾಡು ನನಗಿಂದು ನೋಡ ಪ್ರಾಣಿಗಳು ಅದನ್ನು "ನೀಲಮಣಿ" ಮಹಾ ತಕ್ಷಣ ಪ್ರತಿಕ್ರಿಯಿಂದ ಗೌರವಿಸುತ್ತಿದ್ದವು. ಆದರೆ, ಕಳ್ಳ ನರಿಗೆ ಮುಂಸಿಪತ್ತು. ತನ್ನ ಸ್ವಜಾತಿಯ ಬಂಧುಗಳು ಬಂದಾಗ ತನ್ನ ಗುಟ್ಟು ಎಲ್ಲಿ ಬಯಲಾಗುವದೋ ಎಂದು! ಅಂತೆಯೇ ಅದು ಅವರೆಲ್ಲ ರನ್ನು ದ್ವೇಷಿಸ ಹತ್ತಿತು. ಅವು ಸಮೀಪ ಬಾರದ ಹಾಗೆ ಎಚ್ಚರಿಕೆ ವಹಿಸಿತು. ಯಾವ ನರಿಗೂ ತನ್ನನ್ನು ಕಾಣಲು ಅವಕಾಶವನ್ನಾಗಲಿ ಅನುಮತಿಯನ್ನಾಗಲಿ ಅದು ಕೊಡುತ್ತಿರಲಿಲ್ಲ. ಅಷ್ಟೇ ಅಲ್ಲ ಅಡವಿ ಯಲ್ಲಿದ್ದ ಎಲ್ಲ ನರಿಗಳನ್ನು ವನದಿಂದ ಓಡಿಸಬೇಕೆಂಬ ಆಜ್ಞೆ ತನ್ನ ಸೇನಾಧಿಪತಿ ಬಿರ್ಚಕ್ಕೆ ಅದು ಮಾಡಿತು. ಈ ರಾಜಾಜ್ಞೆಯಿಂದ ನರಿ ಬಳಗದಲ್ಲಿ ಒಂದು ದೊಡ್ಡ ಕೋಲಾಹಲವೇ ಎದ್ದಿತು. ಯಾವ ವನರಾಜನೂ ಈ ರೀತಿ ಕೆಟ್ಟ ವಿಚಾರ ನರಿಗಳ ಬಗ್ಗೆ ಮಾಡುತ್ತಿರ ಲಿಲ್ಲ. ನರಿಗಳನ್ನು ಕೊಲ್ಲುತ್ತಿರಲಿಲ್ಲ. ಹೀಗಾಗಿ ನರಿಗಳೆಲ್ಲವೂ ತುಂಬಾ ಆಲೋಚನೆಗೀಡಾದವು. ನಮ್ಮ ಈ ನಾಡನ್ನು ಕಾಡನ್ನು ಬಿಟ್ಟು ಹೋಗುವದೆಲ್ಲಿ ? ಏನು ಮಾಡಬೇಕೆಂಬುದು ತಿಳಿಯ ದಂತಾಗಿತ್ತು.

ನರಿಗಳ ಗುಂಪಿನಲ್ಲಿ ಒಂದು ನರಿ ಮಾತ್ರ ಬಲುಚುರುಕಾ ಗಿತ್ತು. ಅದು ತನ್ನ ಬಂಧುಗಳಿಗೆ ಕುರಿತು: ನೋಡಿರಿ ಬಂಧು ಗಳೇ ಈ ಹೊಸ ರಾಜನು ಬಲು ವಿಚಿತ್ರವಾಗಿರುವನು, ಸ್ವತಃ ಕೆಲಸವಾಗಲಿ ಸ್ವತಃ ಆಹಾರವನ್ನಾಗಲಿ ಸಂಪಾದಿಸುವದಿಲ್ಲ. ಇವನಿಗೆ ಶಕ್ತಿಯುತವಾದ ಹಲ್ಲುಗಳಾಗಲಿ ಪಂಜರವಾಗಲಿ ಇದ್ದಂತಿಲ್ಲ. ಇವನುಪರರಿಂದಲೇ ಬೇಟೆಯಾಡಿಸಿ ಆಹಾರ ತರಿಸು ತ್ತಾನೆ. ಇದಕ್ಕೆ ನೀವೆನಂತೀರಿ ? ಎಂದಿತು. ಅದಕ್ಕೆ ಮತ್ತೊಂದು ನರಿಯು ಅಹುದು ಇದರಲ್ಲಿಏನೋ ಮೋಸವಿದ್ದಂತೆ ಕಾಣುತ್ತದೆ.

Sri Vidyabharathi Book Centre, Sringeri

CC-O. In Public Domain. Digitiz

ಮುಖ ಲಕ್ಷಣ ನೋಡಿದರೆ ಇವನು ನಷ
ಬಣ್ಣವಷ್ಟೇ ಬೇರೆಯಾಗಿದೆ ಆಗ ಮೊದಲನ
ಸರಿ: ನಾನೊಂದು ಒಂದು ಉಪಾಯವನ್ನು ಹೇಳ
ಮಾಡಿದರೆ ಎಲ್ಲಾ ಹುಳುಕು ಹೊರಗೆ ಬೀಳುತ್ತದೆ
ಎಲ್ಲಾ ನರಿಗಳು ಸೇರಿ ಎನು–ಏನದು ? ಎಂದವು. ಅವಕ್ಕೆ ಆ ನರಿ ಹೇಳಿತು.

"ನಾವೆಲ್ಲರೂ ಯಾರಿಗೂ ತಿಳಿಯದ ಹಾಗೆ ಬಲು ಮೆಲ್ಲಗೆ ಅದರ ಹಿಂಬದಿಗೆ ಹೋಗಿ ಕೂಗಿಕೊಳ್ಳೋಣ" ಎಲ್ಲಾ ನರಿಗಳೂ ಒಪ್ಪಿದವು. ಇತ್ತ ಕಳ್ಳ ನರಿ ರಾಜನು ಪ್ರಾಣಿಗಳ ದರ್ಬಾರದಲ್ಲಿ ಕುಳಿತು ಮೆರೆಯು ಹತ್ತಿತು. ಹಿಂಬದಿಯಿಂದ ನರಿಗಳ ಗಟ್ಟಿಯಾದ ಕೂಗು ಕೇಳಿ ಬಂದಿತು. ಅದನ್ನು ಕೇಳಿದ ನರಿ ತನ್ನ ಸದ್ಯದ ಸ್ಥಿತಿಯು ಅರಿವಾಗದೇ ತನ್ನ ಕಿವಿಗಳನ್ನು ನಿಮಿರಿಸಿ ಆಕಾಶದಲ್ಲಿ ಮುಖವೆತ್ತಿ ಬಾಲ ಅಲ್ಲಾಡಿಸುತ್ತ ತನ್ನ ಜಾತಿಗನುಗುಣವಾಗಿ ಕೂಗಲಾರಂಭಿಸಿತು. ಆಗ ಎಲ್ಲಾ ಪ್ರಾಣಿಗಳು ಸೇರಿ: ಎಲಾ ಇದೂ ಸಹ ನರಿಯೇ ಆಗಿದೆ ! ಎಲ್ಲ ಪ್ರಾಣಿಗಳಲ್ಲಿ ಕ್ರೋಧಾಗ್ನಿ ಧಗಧಗಿಸ ಹತ್ತಿತು. ಇವೆಲ್ಲವೂ ನರಿಯ ಮೇಲೆ ಬಿದ್ದು ಹರಿದು ತಿಂದು ಬಿಟ್ಟವು. ಇತ್ತ ಹಿಂಬದಿಗೆ ಇದ್ದ ಎಲ್ಲಾ ನರಿಗಳು ಓಡಿ ಹೋದವು.

ನಿಮಗೂ ತಿಳಿದಿರಲಿ

ತಿಳಿಯದೇ ಪರರಿಗೆ ವಂಚನೆ ಮಾಡಿದರೆ ಇಂಥ ಫಲಗಳೇ ಸಿಗುವವು.

CC-O. In Public Domain. Digitized by eGangotri

ವಾಗಿ ಕೊಡುತ್ತೆಡಹತ್ತಿ
ನನಗಿಂದು ನೋಪ್ರಾಣಿ
ತಕ್ಷಣ ಪ್ರತಿಸ್ಪಂದ —
ಮುಂಪತ್ತು

Sri Vidyabharathi Book Centre, Sringeri

CC-O. In Public Domain. Di

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಕೊಡುತ್ತೇವೆ
ನನಗಿಂದು ನೂ ಪ್ರಾಣಮ್ಮ ಪ್ರಕಟಣೆಗಳು
ತಕ್ಷಣ ಪ...ಂದ
ಮ...ಬುತು

	ಸಿದ್ಧ ಲಿಂಗೇಶ್ವರ ಭಕ್ತಿ ಗೀತೆಗಳು	2-00
	ಕನ್ನಡ ಚಿತ್ರ ಗೀತೆಗಳು	2-50
	ಭಾವಗೀತೆಗಳು	2-50
	ಜಾನಪದ ಗೀತೆಗಳು	2-50
	ಹರಿ ಭಜನೆ	2-50
ಶೀ	ರಾಮ ಭಜನೆಗಳು	2-50
ಶೀ	ಅಯ್ಯಪ್ಪ ಸ್ವಾಮಿ ಭಕ್ತಿ ಗೀತೆಗಳು	3-00
ಶೀ	ಪುರಂದರದಾಸರ ಕೀರ್ತನೆಗಳು	3-00
ಶೀ	ಸುಬ್ರಹ್ಮಣ್ಯ ಸ್ವಾಮಿ ಭಕ್ತಿ ಗೀತೆಗಳು	3-00
	ಮಕ್ಕಳ ಕಥೆಗಳು	5-00
ಶೀ	ಅಯ್ಯಪ್ಪ ಸ್ವಾಮಿ ಚರಿತ್ರೆ	3-50
ಶೀ	ಉಡುಪಿ ಕ್ಷೇತ್ರ ಪರಿಚಯ	3-50
	ಹೊಸ ಭಕ್ತಿ ಗೀತೆಗಳು	4 00

ಯಾವುದೇ ಪುಸ್ತಕ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬಸವ ಪ್ರಕಾಶನ
ಗಂಗಾಪೂರಪೇಟೆ, ಗದಗ. -582 101.

Rs. 5-00

Sri Vidyabharathi Book Centre, Sringeri